
02 ಸೆಪ್ಟೆಂಬರ್ 2025 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 173 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಭಾರತವು 2026ರ ವಿಶ್ವಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನ ಆತಿಥ್ಯ ವಹಿಸಿಕೊಂಡಿದೆ. ರಾಜಧಾನಿ ನವದೆಹಲಿಯಲ್ಲಿ 30ನೇ ವರ್ಷದ ಪ್ರತಿಷ್ಠಿತ ಚಾಂಪಿಯನ್‌ಶಿಪ್ ನಡೆಯಲಿದೆ.



ಹೌದು ! ತೆಂಗಿನಕಾಯಿಗಳು ಕುತೂಹಲಕಾರಿ ಭೂತಕಾಲವನ್ನು ಹೊಂದಿವೆ... » 2



ಅರ್ಹರಿಗೆ ಸರ್ಕಾರಿ ಸೌಲಭ್ಯ ಒದಗಿಸಲು ಕ್ರಮ ವಹಿಸಿ » 3



ಅಂತರ್ ಬೇಸಾಯ ಕೈಗೊಳ್ಳಲು ರೈತರಿಗೆ ಸಲಹೆ » 4


## ಭಯೋತ್ಪಾದನೆ: ದ್ವಿಮುಖ ನೀತಿ ಸ್ವೀಕಾರಾರ್ಹವಲ್ಲ

### ಪಾಕ್ ಪ್ರಧಾನಿ ಎದುರೇ ಪಹಲ್ಗಾಮ್ ದಾಳಿ ಪ್ರಸ್ತಾಪಿಸಿದ ಮೋದಿ | ಉಗ್ರರ ದಾಳಿ ಖಂಡಿಸಿದ ಶಾಂಘೈ ಸಹಕಾರ ಸಂಘಟನೆ

• ಪ್ರಜೋದಯ ವರದಿ

**ನವದೆಹಲಿ:** ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯನ್ನು ಚೀನಾದ ಟಿಯಾಂಜಿನ್‌ನಲ್ಲಿ ನಡೆದ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಖಂಡಿಸಿದೆ. ಜೊತೆಗೆ ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ದ್ವಿಮುಖ ನೀತಿ ಸ್ವೀಕಾರಾರ್ಹವಲ್ಲ ಎಂಬ ಭಾರತದ ನಿಲುವನ್ನು ಒಪ್ಪಿಕೊಂಡಿದೆ.

ಇದೇ ವೇಳೆ ಇಸ್ರೇಲ್ ದೇಶ ಗಾಜಾದ ಮೇಲೆ ಮಿಲಿಟರಿ ದಾಳಿ ನಡೆಸಿರುವುದನ್ನು ಖಂಡಿಸಿರುವ ಸಂಘಟನೆ, ಶೃಂಗಸಭೆಯಲ್ಲಿ ಭಯೋತ್ಪಾದನೆಯನ್ನು ಎದುರಿಸುವ ತನ್ನ ಬಲವಾದ ಸಂಕಲ್ಪವನ್ನು ಸ್ಪಷ್ಟಪಡಿಸಿದೆ. ಎಸ್‌ಸಿಒ ಶೃಂಗಸಭೆಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್, ರಷ್ಯಾದ ವ್ಲಾದಿಮಿರ್ ಪುಟಿನ್ ಸೇರಿ ಹಲವು ಜಾಗತಿಕ ನಾಯಕರು ಭಾಗಿಯಾಗಿದ್ದರು. ಭಯೋತ್ಪಾದನೆ, ದ್ವಿಮುಖ ನೀತಿಯನ್ನು ಒಪ್ಪಲಾಗದು.



ಅಂತರ್ರಾಷ್ಟ್ರೀಯ ಸಮುದಾಯಗಳು ಭಯೋತ್ಪಾದನೆ ಮತ್ತು ಅಕ್ರಮವಾಗಿ ಗಡಿನುಸುಳುವಿಕೆಯ ವಿರುದ್ಧ ಹೋರಾಡಬೇಕೆಂದು ಸಂಘಟನೆಯ ಸದಸ್ಯರು ಕರೆ ನೀಡಿದರು.

**ಭಯೋತ್ಪಾದನೆ ಜಾಗತಿಕ ಶಾಂತಿಗೆ ಬೆದರಿಕೆ**

ಶೃಂಗಸಭೆಯನ್ನು ಉದ್ದೇಶಿಸಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಾತನಾಡಿ, ಭಯೋತ್ಪಾದನೆ ಜಾಗತಿಕ ಶಾಂತಿಗೆ ಅತಿದೊಡ್ಡ ಬೆದರಿಕೆಯಾಗಿದ್ದು, ಭಯೋತ್ಪಾದನೆಯಲ್ಲಿ ದ್ವಿಮುಖ ಧೋರಣೆ ವಿರುದ್ಧ ನಾವೆಲ್ಲರೂ ಒಗ್ಗಟ್ಟಿನಿಂದ ನಿಲ್ಲಬೇಕೆಂದು ಹೇಳಿದ ಅವರು, ಗಡಿಯಾಚೆಗಿನ ಭಯೋತ್ಪಾದನೆ, ಪ್ರತ್ಯೇಕತಾವಾದ ಮತ್ತು ಉಗ್ರವಾದಕ್ಕೆ ಶೂನ್ಯ ಸಹಿಷ್ಣುತೆಗಾಗಿ ಕರೆ ನೀಡಿದರು.

ಎಸ್‌ಸಿಒ ಶೃಂಗಸಭೆಯಲ್ಲಿ ಭಾಗವಹಿಸಲು ನನಗೆ ಸಂತೋಷವಾಗಿದೆ. ನಮಗೆ ಭವ್ಯ ಸ್ವಾಗತ ನೀಡಿದ್ದಕ್ಕಾಗಿ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರಿಗೆ ನಾನು ಧನ್ಯವಾದ ಹೇಳಲು ಬಯಸುತ್ತೇನೆ. ಇಂದು ಉಜ್ಬೇಕಿಸ್ತಾನ್‌ನ ಸ್ವಾತಂತ್ರ್ಯ ದಿನ. ಈ ಕಾರಣಕ್ಕಾಗಿ ಅವರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಎಸ್‌ಸಿಒ ಸದಸ್ಯ ರಾಷ್ಟ್ರವಾಗಿ ಭಾರತವು ಬಹಳ ಪಾಸಿಟಿವ್ ಪಾತ್ರವನ್ನು ವಹಿಸಿದೆ. ಎಸ್‌ಸಿಒಗಾಗಿ ಭಾರತದ ದೃಷ್ಟಿಕೋನ ಮತ್ತು ನೀತಿಯು ಮೂರು ಪ್ರಮುಖ ಸ್ತಂಭಗಳನ್ನು ಆಧರಿಸಿದೆ. ಅವುಗಳೆಂದರೆ, ಭದ್ರತೆ, ಸಂಪರ್ಕ ಮತ್ತು ಅವಕಾಶ ಎಂದರು.

ಕಳೆದ 4 ದಶಕಗಳಿಂದ ಭಾರತ ಭಯೋತ್ಪಾದನೆಯ ಭಾರವನ್ನು ಹೊರುತ್ತಿದೆ. ಇತ್ತೀಚೆಗೆ, ಪಹಲ್ಗಾಮ್‌ನಲ್ಲಿ ಭಯೋತ್ಪಾದನೆಯ ಕೆಟ್ಟ ಮುಖವನ್ನು ನಾವು ನೋಡಿದ್ದೇವೆ. ಈ ದಾಳಿಯು ಮಾನವೀಯತೆಯಲ್ಲಿ ನಂಬಿಕೆ ಇಡುವ ಪ್ರತಿಯೊಂದು ದೇಶ ಮತ್ತು ವ್ಯಕ್ತಿಗೆ ಬಹಿರಂಗ ಸವಾಲಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ, ಕೆಲವು ದೇಶಗಳು ಭಯೋತ್ಪಾದನೆಗೆ ಬಹಿರಂಗವಾಗಿ ಬೆಂಬಲ ನೀಡುವುದನ್ನು ನಾವು ಒಪ್ಪಿಕೊಳ್ಳಬಹುದೇ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಪ್ರತಿಯೊಂದು ರೂಪ ಮತ್ತು ಬಣ್ಣದಲ್ಲೂ ಭಯೋತ್ಪಾದನೆಯನ್ನು ನಾವು

» ನಾಲ್ಕನೇ ಪುಟದಲ್ಲಿ

### ಮೂವರು ನಾಯಕರು ಮಾತುಕತೆ ಸಂಚಲನ

ಎಸ್‌ಸಿಒ ಶೃಂಗಸಭೆಯಲ್ಲಿ ಭಾರತ, ರಷ್ಯಾ ಮತ್ತು ಚೀನಾ ಶಕ್ತಿಗಳ ಸಮಾಗಮವಾಗಿತ್ತು. ನರೇಂದ್ರ ಮೋದಿ, ವ್ಲಾದಿಮಿರ್ ಪುಟಿನ್, ಷಿ ಜಿನ್‌ಪಿಂಗ್ ಒಟ್ಟಿಗೆ ನಿಂತು ಮಾತನಾಡಿದರು. ಪುಟಿನ್ ಮತ್ತು ಮೋದಿ ನಡುವೆ ಹೆಚ್ಚಿನ ಆಪ್ತತೆ ಕಾಣಿಸಿತ್ತು. ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ತೃತೀಯ ಜಗತ್ತಿನ ರಾಷ್ಟ್ರಗಳ ಶಕ್ತಿಗಳು ನಿರ್ದಿಷ್ಟ ಸಂದೇಶ ರವಾನಿಸಿದಂತೆ ಕಾಣುತ್ತಿದೆ. ಭಾರತ, ರಷ್ಯಾ, ಚೀನಾದ ಜೊತೆ ಅಮೇರಿಕಾ ಸಂಬಂಧ ಈಗ ಹಾಳಾಗಿದೆ. ವ್ಯಾಪಾರ ಒಪ್ಪಂದಕ್ಕೆ ಭಾರತ ಸಹಿ ಹಾಕದ್ದಕ್ಕೆ ಭಾರತದಿಂದ ಆಮದಾಗುವ ಕೆಲ ವಸ್ತುಗಳಿಗೆ ಅಮೇರಿಕಾ ಶೇ.25 ತೆರಿಗೆ ವಿಧಿಸಿತ್ತು. ನಂತರ ರಷ್ಯಾದಿಂದ ಭಾರತ ಕಚ್ಚಾತೈಲವನ್ನು ಆಮದು ಮಾಡುತ್ತಿರುವುದಕ್ಕೆ ದಂಡದ ರೂಪದಲ್ಲಿ ಶೇ.25 ತೆರಿಗೆ ಹಾಕಿದೆ. ತೆರಿಗೆ ಸಮರ ಆರಂಭಿಸಿದ ಬೆನ್ನಲ್ಲೇ ಮೂವರು ನಾಯಕರು ಮಾತುಕತೆ ನಡೆಸಿರುವುದು ಈಗ ವಿಶ್ವದಲ್ಲಿ ಸಂಚಲನ ಮೂಡಿಸಿದೆ.

## ಹಾಮೂಲ್: ವಾರ್ಷಿಕ 2392 ಕೋ.ರೂ. ವಹಿವಾಟು

### 22.29 ಕೋ. ಲಾಭ | ಒಕ್ಕೂಟದ ಅಧ್ಯಕ್ಷ ಹೆಚ್.ಡಿ.ರೇವಣ್ಣ

• ಪ್ರಜೋದಯ ವರದಿ

**ಹಾಸನ:** ಹಾಸನ ಹಾಲು ಒಕ್ಕೂಟ 2024-25ನೇ ಸಾಲಿನಲ್ಲಿ 2392.42 ಕೋ.ರೂ. ವಹಿವಾಟು ನಡೆಸಿ, 22.29 ಕೋ.ರೂ. ಲಾಭ ಗಳಿಸಿದೆ ಎಂದು ಒಕ್ಕೂಟದ ಅಧ್ಯಕ್ಷ ಹೆಚ್.ಡಿ.ರೇವಣ್ಣ ಅವರು ತಿಳಿಸಿದರು.

ಒಕ್ಕೂಟದ ವಾರ್ಷಿಕ ಸಭೆಯ ನಂತರ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.8.58 ರಷ್ಟು ವಹಿವಾಟು ಹೆಚ್ಚಳವಾಗಿದೆ. ತೆರಿಗೆ ಪೂರ್ವ 22.29 ಕೋ.ರೂ. ಲಾಭದಲ್ಲಿ 5.04 ಕೋ.ರೂ. ಬೈಲಾ ನಿಯಮಗಳಂತೆ ಸದಸ್ಯ ಸಂಘಗಳಿಗೆ ಬೋನಸ್ ಮತ್ತು ಡಿವಿಡೆಂಡ್ ರೂಪದಲ್ಲಿ ಹಂಚಿಕೆ ಮಾಡಲಾಗಿದೆ ಎಂದು ವಿವರಿಸಿದರು.

2025-26ನೇ ಸಾಲಿಗೆ 2719.80 ಕೋ.ರೂ.ವಹಿವಾಟು ನಡೆಸುವ ಗುರಿ ಹೊಂದಲಾಗಿದೆ. 4.50 ಕೋ.ರೂ. ನಿವ್ವಳ ಆದಾಯ ನಿರೀಕ್ಷಿಸಲಾಗಿದೆ. ಒಕ್ಕೂಟ ಮತ್ತು ಉತ್ಪಾದಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಖರೀದಿ ದರವನ್ನು ಪರಿಷ್ಕರಣೆ ಮಾಡಲಾಗುತ್ತಿದ್ದು, ಪ್ರಸ್ತುತದಲ್ಲಿ 36.17 ರೂ. ರಂತೆ ಸಂಘಗಳಿಗೆ ಹಾಗು 34.50ರೂ.ನಂತೆ ಉತ್ಪಾದಕರಿಗೆ ಖರೀದಿ ದರ ನೀಡಲಾಗುತ್ತಿದೆ. ಪ್ರಸ್ತುತ 15.12 ಲಕ್ಷ ಲೀಟರ್ ಹಾಲು ಸಂಗ್ರಹಿಸುತ್ತಿದ್ದು, ಒಕ್ಕೂಟದ ನಿರೀಕ್ಷೆಯಂತೆ ಹಾಲು ಸಂಗ್ರಹಣೆ ಪ್ರಗತಿಯನ್ನು ಕಾಯ್ದುಕೊಳ್ಳಲಾಗಿದೆ. 1717 ಸಂಘಗಳಿಂದ ಪ್ರತಿದಿನ ಸರಾಸರಿ 14.15 ಲಕ್ಷ ಲೀಟರ್‌ಗಳಷ್ಟು ಹಾಲು ಸಂಗ್ರಹಿಸಲಾಗುತ್ತಿದೆ ಎಂದರು

» ನಾಲ್ಕನೇ ಪುಟದಲ್ಲಿ



### ಮೆಗಾ ಡೇರಿ ಉದ್ಘಾಟನೆಗೆ ಪ್ರಧಾನಿಗೆ ಆಹ್ವಾನ

ನಗರದ ಕೈಗಾರಿಕಾ ಪ್ರದೇಶದ 66 ಎಕರೆ ಪ್ರದೇಶದಲ್ಲಿ 735 ಕೋ.ರೂ. ವೆಚ್ಚದ 10 ಲಕ್ಷ ಲೀಟರ್ ಸಾಮರ್ಥ್ಯದ ಮೆಗಾ ಡೇರಿ ನಿರ್ಮಾಣ ಹಾಗು 60 ಮೆಟ್ರಿಕ್ ಟನ್ ಹಾಲಿನ ಪುಡಿ ಘಟಕ ನಿರ್ಮಾಣ ಕಾರ್ಯದ ಕಾಮಗಾರಿ, ಯಂತ್ರೋಪಕರಣಗಳ ಪೂರೈಕೆ ಮತ್ತು ಅಳವಡಿಕೆ ಕೆಲಸ ಬಹುತೇಕ ಪೂರ್ಣಗೊಂಡಿದೆ. 2026 ಜನವರಿ ಅಥವಾ ಫೆಬ್ರವರಿಯಲ್ಲಿ ಕಾರ್ಯಾರಂಭ ಮಾಡಲಿದೆ. ಉದ್ಘಾಟನೆಗೆ ಪ್ರಧಾನಿ ಅಥವಾ ಕೇಂದ್ರದ ಮಂತ್ರಿಗಳಿಗೆ ಆಹ್ವಾನ ನೀಡುವ ಬಗ್ಗೆ ಹೆಚ್.ಡಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ ಅವರು ನಿರ್ಧರಿಸಲಿದ್ದಾರೆಂದು ರೇವಣ್ಣ ಅವರು ತಿಳಿಸಿದರು.

## ಪಾಂಚಜನ್ಯ ಹಿಂದೂ ಗಣಪತಿ: ಬೈಕ್ ರ್‍ಯಾಲಿ



• ಪ್ರಜೋದಯ ವರದಿ

**ಹಾಸನ:** ಪಾಂಚಜನ್ಯ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆ ಅಂಗವಾಗಿ ಸೋಮವಾರ ನಗರದಲ್ಲಿ ಹಮ್ಮಿಕೊಂಡಿದ್ದ ಬೈಕ್ ರ್‍ಯಾಲಿಗೆ ಆರ್‌ಎಸ್‌ಎಸ್ ಮುಖಂಡ ವಿಜಯಕುಮಾರ್ ನಾರ್ವೆ ಅವರು ಚಾಲನೆ ನೀಡಿದರು.

ಪಾಂಚಜನ್ಯ ಹಿಂದೂ ಗಣಪತಿ ಸಮಿತಿ ಕಾರ್ಯದರ್ಶಿ ವೇಣುಗೋಪಾಲ್ ಅವರು ಮಾತನಾಡಿ, ಗಣೇಶ ಉತ್ಸವದಲ್ಲಿ ಬಾಲಗಂಗಾಧರ ತಿಲಕ್ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯರೆಲ್ಲರನ್ನೂ ಒಗ್ಗೂಡಿಸಲು ಗಣೇಶ ಚತುರ್ಥಿಯನ್ನು ಸಾರ್ವತ್ರಿಕರಣಗೊಳಿಸಿದರು. ಹಿಂದೂಗಳಲ್ಲಿ ಏಕತೆ ಮೂಡಿಸಲು ಗಣೇಶೋತ್ಸವ ಜಾರಿಗೆ ತರಲಾಯಿತು ಎಂದರು.

ಕಳೆದ 16 ವರ್ಷದಿಂದ ಪಾಂಚಜನ್ಯ ಹಿಂದೂ ಗಣಪತಿ ಉತ್ಸವ ನಡೆಸಿಕೊಂಡು ಬರಲಾಗುತ್ತಿದ್ದು ಆ.27 ರಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಗಣಪತಿ ಅದ್ದೂರಿಯಾಗಿ ಪ್ರತಿಷ್ಠಾಪನೆ ಮಾಡಲಾಗಿದ್ದು, ನಿತ್ಯ ಮಧ್ಯಾಹ್ನ 12 ಗಂಟೆ ಹಾಗು ಸಂಜೆ 8 ಗಂಟೆಗೆ ಮಹಾಮಂಗಳಾರತಿ ನೆರವೇರುತ್ತದೆ. ನಗರದಲ್ಲಿ 400ಕ್ಕೂ ಹೆಚ್ಚು ಗಣಪತಿ ಪ್ರತಿಷ್ಠಾಪನೆ ಮಾಡಲಾಗಿದ್ದು, ಅದರಲ್ಲಿ ಪಾಂಚಜನ್ಯ ಗಣಪತಿಯ ವಿಶೇಷತೆ ರಾಷ್ಟ್ರೀಯತೆಯಾಗಿದೆ ಎಂದರು. ಪಾಂಚಜನ್ಯ ಹಿಂದೂ ಗಣಪತಿ ಸಮಿತಿ ಗೌರವಾಧ್ಯಕ್ಷ ದಯಾನಂದ್, ಅಧ್ಯಕ್ಷ ವಾಸು, ಮೋಹನ್, ಖಜಾಂಚಿ ಸಾಯಿಪ್ರಸಾದ್, ನಿರ್ದೇಶಕ ಶರತ್, ರಕ್ಷಿತ್ ಭಾರದ್ವಾಜ್ ಇತರರಿದ್ದರು.

## ಗಣೇಶ ವಿಸರ್ಜನಾ ಮೆರವಣಿಗೆಯಲ್ಲಿ ಪ್ರಾಣಬಿಟ್ಟ ಯುವಕ

• ಪ್ರಜೋದಯ ವರದಿ

**ಅರಕಲಗೂಡು:** ಗಣಪತಿ ವಿಸರ್ಜನೆ ವೇಳೆ ಡ್ರಮ್ ಸೆಟ್ ಮುಂದೆ ಕುಣಿಯುತ್ತಿದ್ದ ಯುವಕ ಹೃದಯಾಘಾತದಿಂದ ಮೃತಪಟ್ಟಿರುವ ಘಟನೆ



ತಾಲ್ಲೂಕಿನ ಆನಂದಪುರ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದಿದೆ. ಗ್ರಾಮದ ವಾಟರ್ ಮ್ಯಾನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಮಂಜುನಾಥ್ (29) ಮೃತರು. ವಿನಾಯಕ ಗೆಳೆಯರ ಬಳಗದಿಂದ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆಯಲ್ಲಿ ಭಾಗವಹಿಸಿದ್ದ. ಗೆಳೆಯರೊಂದಿಗೆ ನೃತ್ಯ ಮಾಡುತ್ತಿದ್ದಾಗಲೇ ಎದೆನೋವು ಕಾಣಿಸಿಕೊಂಡು ಬಿದ್ದಿದ್ದಾನೆ. ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ.

## ಮೂರು ವರ್ಷದಲ್ಲಿ ಹಾಮೂಲ್ ನಂಬರ್ ಒನ್

### ಜಿಲ್ಲೆಯ ಅಭಿವೃದ್ಧಿ ಮೆಲುಕು ಹಾಕಿದ ರೇವಣ್ಣ | ಸಂಘದ ವಾರ್ಷಿಕ ಸಾಮಾನ್ಯ ಸಭೆ

• ಪ್ರಜೋದಯ ವರದಿ

**ಹಾಸನ:** ಹಾಲು ಸಂಗ್ರಹದಲ್ಲಿ ಬೆಂಗಳೂರು ನಂತರ ಎರಡನೇ ಸ್ಥಾನದಲ್ಲಿರುವ ಹಾಸನ ಮುಂದಿನ ಮೂರು ವರ್ಷಗಳಲ್ಲಿ ಮೊದಲ ಸ್ಥಾನ ಪಡೆಯುವ ಗುರಿ ಹಾಕಿಕೊಳ್ಳಲಾಗಿದೆ ಎಂದು ಹಾಮೂಲ್ ಅಧ್ಯಕ್ಷ ಹೆಚ್.ಡಿ.ರೇವಣ್ಣ ಅವರು ತಿಳಿಸಿದರು.

ನಗರದ ಹಾಮೂಲ್ ಆವರಣದಲ್ಲಿ ಸೋಮವಾರ ನಡೆದ ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ 2024-25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಿತ್ಯ 14.30 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದ್ದು, ಅದನ್ನು 20 ರಿಂದ 25 ಲಕ್ಷ ಲೀಟರ್‌ಗೆ ಹೆಚ್ಚಿಸಬೇಕಿದೆ. ಅದಕ್ಕಾಗಿ ಹೈನುಗಾರರು, ಸಂಘದ ನಿರ್ದೇಶಕರು ಹಾಗು ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕೆಂದು ಸೂಚನೆ ನೀಡಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಬದುಕಿರುವಾಗಲೇ ಅಭಿವೃದ್ಧಿಯಲ್ಲಿ ಹಾಸನ ರಾಜ್ಯದ ನಂಬರ್ ಒನ್ ಜಿಲ್ಲೆಯಾಗಬೇಕೆಂಬುದು ನನ್ನ ಧ್ಯೇಯ. ಆ ನಿಟ್ಟಿನಲ್ಲಿ ಈಗಾಗಲೇ ಸಾಕಷ್ಟು ಕೆಲಸ ಮಾಡಿದ್ದೇನೆ. ದಕ್ಷಿಣ ಭಾರತದಲ್ಲೇ ಅತ್ಯುತ್ತಮ ಡೇರಿ ಎಂಬ ಪ್ರಶಂಸೆಗೆ ಹಾಮೂಲ್ ಪಾತ್ರವಾಗಿದೆ. 250 ಖಾಲಿ ಹುದ್ದೆಗಳಿದ್ದರೂ ಖರ್ಚು ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಭರ್ತಿ ಮಾಡಿಲ್ಲ. ಇರುವ ಸಿಬ್ಬಂದಿಯೇ ಒತ್ತಡದ ನಡುವೆ ಕೆಲಸ ಮಾಡುತ್ತಿದ್ದಾರೆ. 20 ಕೋ.ರೂ. ವೆಚ್ಚದಲ್ಲಿ ಕೊಡಗು ಡೇರಿಯನ್ನು



> ಸ್ವಂತಕ್ಕೆ ನಮ್ಮ ಕುಟುಂಬ ಏನೂ ಮಾಡಿಕೊಂಡಿಲ್ಲ. ಜಿಲ್ಲೆಗೆ ಅನ್ಯಾಯ ಮಾಡಿದವರನ್ನು ಧರ್ಮಸ್ಥಳ ಮಂಜುನಾಥಸ್ವಾಮಿ ನೋಡಿಕೊಳ್ಳುತ್ತಾನೆ. ಜಿಲ್ಲೆಯ ಜನರಿಗೆ ಮೋಸ ಮಾಡಬೇಡಿ ಎಂದಷ್ಟೇ ನಾನು ಸರ್ಕಾರವನ್ನು ಕೇಳುತ್ತೇನೆ.
> -ಹೆಚ್.ಡಿ.ರೇವಣ್ಣ, ಮಾಜಿ ಸಚಿವ

ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

**ಸ್ವಂತಕ್ಕೆ ಏನೂ ಮಾಡಿಕೊಂಡಿಲ್ಲ**

ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಿಂದ ಹಾಸನದಲ್ಲಿ ವಿಮಾನ ನಿಲ್ದಾಣ ನಿರ್ಮಿಸಬೇಕೆಂದು ಸಾವಿರ ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಯಿತು. ಅದರಲ್ಲಿ 220 ಎಕರೆ ಸರ್ಕಾರಿ ಜಮೀನಿದ್ದು, ಅದನ್ನು ಕಬಳಿಸಲು ಕೆಲವರು

» ನಾಲ್ಕನೇ ಪುಟದಲ್ಲಿ

### ನಾನು ಏನಂತ ಮುಂದೆ ತೋರಿಸ್ತಿನಿ

ಕೆಲವರು ರೇವಣ್ಣನ ಕಾಲ ಮುಗೀತು ಅಂತಾರೆ. ಕಾದು ನೋಡಿ, ನಮಗೂ ಕಾಲ ಬರುತ್ತದೆ. ರೇವಣ್ಣ, ಕುಮಾರಣ್ಣ, ಹೆಚ್.ಡಿ.ದೇವೇಗೌಡರು ಅಂದರೆ ಏನಂತ ತೋರಿಸುತ್ತೇನೆ. ಎಲ್ಲದಕ್ಕೂ ಕಾಲ ಕೂಡಿ ಬರುತ್ತದೆ. ಈ ಡೇರಿ ನಿರ್ಮಾಣ ಸಂದರ್ಭದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರಿಗೆ ಎಷ್ಟು ಕಾಟ ಕೊಟ್ಟರೆಂಬುದು ಜನರಿಗೆ ಗೊತ್ತಿದೆ. ರೇವಣ್ಣನ ಕಾಲ ಮುಗಿಯಿತೆಂದು ಹೊರ ಜಿಲ್ಲೆಯ ರಾಜಕಾರಣಿಗಳು ತಿಳಿದಿದ್ದರೆ ಏನು ಅಂತ ತೋರಿಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

### ಧರ್ಮಾಧಿಕಾರಿ ಧೃತಿಗೆಡುವುದು ಬೇಡ

ಧರ್ಮಸ್ಥಳ ಮಂಜುನಾಥಸ್ವಾಮಿಗೆ ನೂರಾರು ವರ್ಷಗಳ ಇತಿಹಾಸವಿದೆ. ಕ್ಷೇತ್ರದ ವಿರುದ್ಧ ಯಾರೇ ಷಡ್ಯಂತ್ರ, ಅಪಪ್ರಚಾರ ಮಾಡಿದರೂ ಏನೂ ಮಾಡಲು ಆಗುವುದಿಲ್ಲ. ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ಜೊತೆಗೆ ಲಕ್ಷಾಂತರ ಜನರಿದ್ದು, ಅವರು ಧೃತಿಗೆಡುವುದು ಬೇಡವೆಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಹೇಳಿದರು. ಸಾರ್ವಜನಿಕ ಜೀವನದಲ್ಲಿ ಇರುವವರಿಗೆ ಇಂತಹ ಕಷ್ಟಗಳು ಬಂದೇ ಬರುತ್ತವೆ. ರಾಜ್ಯದ ಎಲ್ಲಾ ಜನರು ಧರ್ಮಾಧಿಕಾರಿಗಳ ಪರ ಇದ್ದು ಅವರು ಆತ್ಮಸ್ಥೈರ್ಯ ಕಳೆದು ಕೊಳ್ಳ ಬಾರದೆಂದರು.

## ಭಾಷೆ, ಸಂಸ್ಕೃತಿ ರಕ್ಷಣೆ ಎಲ್ಲರ ಜವಾಬ್ದಾರಿ: ರಾಷ್ಟ್ರಪತಿ

• ಪ್ರಜೋದಯ ವರದಿ

**ಮೈಸೂರು:** ಪ್ರತಿಯೊಬ್ಬರು ತಮ್ಮ ಭಾಷೆಯನ್ನು ಜೀವಂತವಾಗಿಡಲು, ಸಂಪ್ರದಾಯ ಹಾಗು ಸಂಸ್ಕೃತಿ ರಕ್ಷಿಸಲು ಮುಂದಾಗಬೇಕೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹೇಳಿದರು.

ಮೈಸೂರಿನಲ್ಲಿ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಎಐಐಎಸ್‌ಹೆಚ್)ಯ ವಜ್ರಮಹೋತ್ಸವದಲ್ಲಿ ಮಾತನಾಡಿದ ಅವರು, ನಾನು ಕನ್ನಡ ಕಲಿಯಲು ಪ್ರಯತ್ನಿಸುತ್ತಿದ್ದೇನೆ. ದೇಶದ ಪ್ರತಿಯೊಂದು ಭಾಷೆ, ಸಂಸ್ಕೃತಿ ಮತ್ತು ಸಂಪ್ರದಾಯದ ಬಗ್ಗೆ ಅಪಾರ ಗೌರವವಿದೆ ಎಂದರು.

ಕನ್ನಡ ನನ್ನ ಮಾತೃ ಭಾಷೆಯಲ್ಲದಿದ್ದರೂ, ದೇಶದ ಎಲ್ಲಾ ಭಾಷೆಗಳು, ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಗೌರವಿಸುತ್ತೇನೆ. ಪ್ರತಿಯೊಂದರ ಬಗ್ಗೆಯೂ ನನಗೆ ಅಪಾರ ಗೌರವವಿದೆ ಎಂದು ಹೇಳಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ, ಮಗು ಹೊಟ್ಟೆಯಲ್ಲಿರುವಾಗಲೇ ಮಗುವಿನ ವಾಕ್ ಮತ್ತು ಶ್ರವಣ ಸಮಸ್ಯೆ ಪತ್ತೆ ಹಚ್ಚಲು ಸಾಧ್ಯವಾಗಿರುವುದು ನಿಜಕ್ಕೂ ದೊಡ್ಡ ಸಾಧನೆ. ಅದಕ್ಕಾಗಿ ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆ ಅಭಿನಂದನೀಯವಾಗಿದೆ. ಮನುಷ್ಯರಿಗೆ ದೇಹದ ಎಲ್ಲಾ ಅಂಗಗಳು ಮುಖ್ಯವಾದರೂ ಕಣ್ಣು, ಕಿವಿ ಅತಿ ಮುಖ್ಯವಾದ ಅಂಗಗಳಾಗಿವೆ. ದೃಷ್ಟಿ ಮತ್ತು ಶಬ್ದಗಳ ಗ್ರಹಿಕೆಯು ಮನುಷ್ಯರ ಮಾತುಗಳನ್ನು ರೂಪಿಸುತ್ತವೆ. 2011ರ ರಾಷ್ಟ್ರೀಯ ಜನಗಣತಿಯ ಪ್ರಕಾರ ರಾಜ್ಯದಲ್ಲಿ 3.3 ಲಕ್ಷ ಜನರು ಮಾತು ಬಾರದವರು ಹಾಗು ಕಿವಿ ಕೇಳಿಸದವರಿದ್ದಾರೆ. ಶೇ. 0.5 ರಷ್ಟಿರುವ ಈ ಅಸಹಾಯಕರು ನಮಗೆ ಅಂಕಿ ಸಂಖ್ಯೆಗಳಲ್ಲ, ಜೀವಂತ ಮನುಷ್ಯರ ನಿರಂತರ ಕಷ್ಟದ ಉದಾಹರಣೆಗಳು. ಹಾಗಾಗಿ ಈ ಸಮಸ್ಯೆ ಇರುವವರನ್ನು ಅತ್ಯಂತ ಎಚ್ಚರಿಕೆಯಿಂದ ಕಾಪಾಡಿಕೊಳ್ಳುವುದು ನಾಗರಿಕ ಸಮಾಜದ ಹಾಗೂ ಸರ್ಕಾರದ ಜವಾಬ್ದಾರಿಯಾಗಿದೆ ಎಂದರು.

## ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮದಿನಾಚರಣೆ

**ಹಾಸನ :** ಹಾಸನಾಂಬ ಕಲಾಕ್ಷೇತ್ರದಲ್ಲಿ ಸೆ.05 ರಂದು ಬೆ.10 ಗಂಟೆಗೆ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮದಿನಾಚರಣೆ ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಸಮಾರಂಭ ಕಾರ್ಯ ಕ್ರಮವನ್ನು ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸುವರು. ರಾಜ್ಯ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಗೌರವ ಉಪಸ್ಥಿತಿ ವಹಿಸಲಿದ್ದಾರೆ. ಶಾಸಕ ಹೆಚ್.ಪಿ. ಸ್ವರೂಪ್ ಅಧ್ಯಕ್ಷತೆ ವಹಿಸುವರು. ಸಂಸದ ಶ್ರೇಯಸ್, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಶಾಸಕರಾದ ಡಾ.ಸಿ. ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ. ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರು, ಮಹಾನಗರ ಪಾಲಿಕೆಯ ಪ್ರಭಾರ ಮೇಯರ್ ಹೇಮಲತಾ ಕಮಲಕುಮಾರ್ ಭಾಗವಹಿಸಲಿದ್ದಾರೆ. ವಿಶ್ರಾಂತ ಪ್ರಾಧ್ಯಾಪಕ ಹಂಪನಹಳ್ಳಿ ತಿಮ್ಮೇಗೌಡ ಅವರು ಪ್ರಧಾನ ಭಾಷಣ ಮಾಡಲಿದ್ದಾರೆ.

## ಮಾನನಷ್ಟ ಮೊಕದ್ದಮೆಗೆ ಹೆದರುವುದಿಲ್ಲ: ಸಂತೋಷ್

• ಪ್ರಜೋದಯ ವರದಿ

**ಅರಸೀಕೆರೆ:** ತಾವು ಮಾಡಿದ ಭ್ರಷ್ಟಾಚಾರವನ್ನು ಬಯಲಿಗೆಳೆದವರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುವುದಾದರೆ ಹೆದರಿಕೂರುವುದಿಲ್ಲ. ಕಾನೂನು ಹೋರಾಟ ಮಾಡುತ್ತೇನೆಂದು ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಅವರು ತಿರುಗೇಟು ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಯಾವ ಬೆದರಿಕೆ ಹಾಕಿದರೂ ನಾನು ಭ್ರಷ್ಟಾಚಾರದ ವಿರುದ್ಧ ಹೋರಾಟ ನಿಲ್ಲಿಸುವುದಿಲ್ಲ. ಹೋರಾಟದಿಂದ ಹಿಂದೆ ಸರಿಯುವುದಿಲ್ಲ. ನಿಮ್ಮ ಅಣತಿಯಂತೆ ಅಧಿಕಾರಿಗಳು ನಡೆಸಿರುವ ಭ್ರಷ್ಟಾಚಾರ, ಮನೆ ಹಂಚಿಕೆಯಲ್ಲಿ ಬಡವರಿಗೆ ಮಾಡಿರುವ ಅನ್ಯಾಯ ಸಂಬಂಧ



ನಾನು ಸಂಗ್ರಹಿಸಿರುವ ದಾಖಲೆ, ತಪ್ಪು ಮಾಡಿರುವ ಅಧಿಕಾರಿಗಳ ವಿರುದ್ಧ ಮೇಲಾಧಿಕಾರಿಗಳು ಸರ್ಕಾರಕ್ಕೆ ನೀಡಿರುವ ವರದಿಯ ಪ್ರತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆಂದರು.

ಶಾಸಕರ ವಿರುದ್ಧ ಮಾಡಿರುವ ಆರೋಪಕ್ಕೆ ಈಗಲೂ ಬದ್ಧನಾಗಿದ್ದೇನೆ. ಸೆ.8ರ ಬಳಿಕ ಅರಸೀಕೆರೆಯಿಂದ ಹಾಸನಕ್ಕೆ ಪಾದಯಾತ್ರೆ ಹಮ್ಮಿಕೊಳ್ಳಲಾಗುವುದು. ಶಾಸಕರ ಗೊಡ್ಡು ಬೆದರಿಕೆಗೆ ಹೋರಾಟದಿಂದ ಹಿಂದೆ ಸರಿಯುವುದಿಲ್ಲ. ನಾನು ಯಾರನ್ನೂ ಎತ್ತಿಕಟ್ಟುವ ಅವಶ್ಯಕತೆ ಇಲ್ಲವೆಂದರು.

ನಗರದ ಕೋರ್ಟ್ ಆವರಣದಲ್ಲಿ ಟೆಂಡರ್ ಕರೆಯದೇ ಕೆಲಸ ಮಾಡಲಾಗಿದೆ. ಅದನ್ನು ಬಿಲ್ ಮಾಡಿದರೆ ಅಧಿಕಾರಿಗಳಿಗೆ ಸಂಕಷ್ಟ ಎದುರಾಗಲಿದೆ. ನಾನು ಯಾವುದೇ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗು ಸದಸ್ಯರ ವಿರುದ್ಧ ಮಾತನಾಡಿಲ್ಲ. ನನ್ನ ದೂರು ಭ್ರಷ್ಟಾಚಾರ, ಭ್ರಷ್ಟ ಅಧಿಕಾರಿಗಳ ವಿರುದ್ಧ ಮಾತ್ರ ಎಂದು ಎಚ್ಚರಿಸಿದರು.

ನಿಮ್ಮ ಜೊತೆಯಲ್ಲೇ ಇರುವ ಕೆಲವರು ಬಡವರಿಗೆ ಅನ್ಯಾಯ ಮಾಡಿದ್ದಾರೆ. ಆ ಬಗ್ಗೆಯೂ ನನ್ನ ಬಳಿ ದಾಖಲೆಗಳಿದ್ದು, ಶೀಘ್ರ ಬಿಡುಗಡೆ ಮಾಡುವೆ. ನಾನು ಈವರೆಗೂ ಮಾತನಾಡಿರುವ ಎಲ್ಲ ಮಾತು, ಆರೋಪಗಳ ದಾಖಲೆಗಳಿವೆ ಎಂದರು.

### ಸೆ.10 ರಂದು ಮೇಯರ್ ಚುನಾವಣೆ

ಹಾಸನ : ಮಹಾನಗರ ಪಾಲಿಕೆಯ ಮೇಯರ್ ಸ್ಥಾನಕ್ಕೆ ಚುನಾವಣೆಯನ್ನು ಸೆ.10 ರಂದು ಅಪರಾಹ್ನ 1.30 ಗಂಟೆಗೆ ಸರಿಯಾಗಿ ಹಾಸನ ಮಹಾನಗರ ಪಾಲಿಕೆ ರಾಷ್ಟ್ರಕವಿ ಕುವೆಂಪು ಸಭಾಂಗಣದಲ್ಲಿ ನಡೆಯಲಿದೆ.

## ನಾಳೆ ಅಲೆಮಾರಿಗಳ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಒಳಮೀಸಲಾತಿಯಲ್ಲಿ ಬಲಾಢ್ಯ ಸಮುದಾಯಗಳ ಪಟ್ಟಿಯಲ್ಲಿ ಅಲೆಮಾರಿಗಳನ್ನು ಸೇರ್ಪಡಿಸಿ ಜೀವಿಸುವ ಹಕ್ಕನ್ನು ಕಸಿದ ರಾಜ್ಯ ಸರ್ಕಾರದ ವಿರುದ್ಧ ಸೆ.3ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಅಲೆಮಾರಿ ಸಮುದಾಯದ ರಾಜ್ಯ ಉಪಾಧ್ಯಕ್ಷ ಗೋವಿಂದರಾಜು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಒಳಮೀಸಲಾತಿ ವರ್ಗೀಕರಣದಲ್ಲಿ ತಮಗೆ ಆಗಿರುವ ಅನ್ಯಾಯ ಖಂಡಿಸಿ ಹೋರಾಟ ನಡೆಯುತ್ತಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಶಿಕ್ಷಣ, ಸಂಘಟನೆ, ಹೋರಾಟದಿಂದ ಮಾತ್ರ ಅಭಿವೃದ್ಧಿ ಸಾಧ್ಯವೆಂದು ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ನಮಗೆ ಅಭಿವೃದ್ಧಿಗೆ ಮೀಸಲಾತಿ ಕಲ್ಪಿಸಿದ್ದರೂ, ಅಂತಹ ನಮ್ಮ ಅಲೆಮಾರಿ ಜನರಿಗೆ ಸಿಗಬೇಕಾದ ಮೀಸಲಾತಿ ಹಕ್ಕನ್ನು ಕಸಿದು ಬಲಾಢ್ಯ ಸಮುದಾಯದವರೊಟ್ಟಿಗೆ ಸೇರ್ಪಡೆ ಮಾಡಿರುವುದು ಅನ್ಯಾಯವಾಗಿದೆ ಎಂದರು.

ಕಳೆದ 2500 ವರ್ಷಗಳಿಂದಲೂ ಅಸ್ಪೃಶ್ಯ ಅಲೆಮಾರಿ ಮತ್ತು ಸೂಕ್ಷ್ಮ, ಅತಿಸೂಕ್ಷ್ಮ ಸಮುದಾಯದ ಜನರು ಅಭಿವೃದ್ಧಿಯನ್ನೇ ಕಾಣದೇ ಬೀದಿ, ಬೀದಿಗಳಲ್ಲಿ ನಾಯಿ, ಹಂದಿಗಳು ವಾಸಿಸಲು ಯೋಗ್ಯವಲ್ಲದ ಊರು ಹೊರಗಿನ ಸ್ಥಳಗಳಲ್ಲಿ ಗುಡಿಸಲು, ಟೆಂಟ್, ಗುಡಾರಗಳಲ್ಲಿ ಬದುಕುತ್ತಿದ್ದಾರೆ. ಅಂತಹ ಅಲೆಮಾರಿ ಸಮುದಾಯಗಳಿಗೆ ಜಸ್ಟೀಸ್ ನಾಗಮೋಹನ್ ದಾಸ್ ವರದಿಯಲ್ಲಿ ಸೂಚಿಸಿರುವಂತೆ ಆದ್ಯತೆ ಮೇರೆಗೆ ಎ ವರ್ಗದಲ್ಲಿ ಗುರುತಿಸಿ ಶೇ.1 ರಷ್ಟು ಒಳಮೀಸಲಾತಿ ನೀಡಬಹುದೆಂದು ಹೇಳಿದರು. ಸರ್ಕಾರ ಅದನ್ನು ಕಡೆಗಣಿಸಿದೆ ಎಂದು ಆರೋಪಿಸಿದರು.

### ಸಕಲೇಶಪುರ ತಾಲ್ಲೂಕಿನಲ್ಲಿ ಹೆಚ್ಚುವರಿ 1,727 ಮಿ.ಮೀ ವರ್ಷಧಾರೆ | ಹಾಸನದಲ್ಲೇ ವರುಣನ ಅಬ್ಬರ ಕಡಿಮೆ

## ಜಿಲ್ಲೆಯಲ್ಲಿ ವಾಡಿಕೆಗಿಂತ 268 ಮಿ.ಮೀ. ಹೆಚ್ಚು ಮಳೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಕಳೆದ ಐದು ತಿಂಗಳಿನಿಂದ ನಿರಂತರವಾಗಿ ಸುರಿಯುತ್ತಿರುವ ಮಳೆ ಜನರಿಗೆ, ರೈತರಿಗೆ ಅನುಕೂಲಕ್ಕಿಂತ ಹೆಚ್ಚಿನದಾಗಿ ಅನಾನುಕೂಲವಾಗಿ ಪರಿಣಮಿಸಿದೆ. ಜಿಲ್ಲೆಯಲ್ಲಿ ವಾಡಿಕೆಗಿಂತ ಒಟ್ಟು 268 ಮಿಲಿಮೀಟರ್ (ಶೇ.35) ರಷ್ಟು ಹೆಚ್ಚುವರಿ ಮಳೆಯಾಗಿದೆ.

ಜಿಲ್ಲೆಯಲ್ಲಿ ಈ ವರ್ಷ ಆಗಸ್ಟ್ ತಿಂಗಳ ಅಂತ್ಯಕ್ಕೆ ವಾಡಿಕೆಯಂತೆ 776 ಮಿ.ಮೀ. ಮಳೆಯಾಗಬೇಕಿತ್ತು. ಆದರೆ, 1,044 ಮಿ.ಮೀ ಮಳೆಯಾಗಿದೆ. ಅದರಲ್ಲೂ ಮಲೆನಾಡು ಭಾಗವಾಗಿರುವ ಸಕಲೇಶಪುರ ತಾಲ್ಲೂಕಿನಲ್ಲಿ ವಾಡಿಕೆಗಿಂತ ದುಪ್ಪಟ್ಟು ಮಳೆಯಾಗಿದೆ. 1,794 ಮಿ.ಮೀ. ಮಳೆಯಾಗಬೇಕಿತ್ತು. ಆದರೆ, ಬರೋಬ್ಬರಿ 3,521 ಮಿ.ಮೀ. ಮಳೆಯಾಗುವ ಮೂಲಕ 1,727 ಮಿ.ಮೀ (ಶೇ. 96) ಹೆಚ್ಚುವರಿ ಮಳೆ ಸುರಿದು ದಾಖಲೆ ಬರೆದಿದೆ. ಅದರಲ್ಲೂ ಹೆತ್ತೂರು ಹೋಬಳಿಯಲ್ಲೇ ಅತೀ ಹೆಚ್ಚು ವರಣ ಆರ್ಭಟಿಸಿದ್ದಾನೆ. ಹಾಸನ ತಾಲ್ಲೂಕಿನಲ್ಲೇ ಅತೀ ಕಡಿಮೆ ವಾಡಿಕೆಗಿಂತ ಶೇ.4 ರಷ್ಟು ಮಾತ್ರ ಹೆಚ್ಚುವರಿ ಮಳೆಯಾಗಿದೆ. ಉಳಿದ ಎಲ್ಲಾ ತಾಲ್ಲೂಕುಗಳಲ್ಲಿ ಶೇ.20 ರಿಂದ 44ರಷ್ಟು ಹೆಚ್ಚಿನ ಪ್ರಮಾಣದ ವರ್ಷಧಾರೆ ಸುರಿದಿದೆ.

ಪೂರ್ವ ಮುಂಗಾರು ಏಪ್ರಿಲ್ ತಿಂಗಳಲ್ಲಿ ಜಿಲ್ಲೆಯಲ್ಲಿ ಶೇ.81ರಷ್ಟು ಮಳೆಯಾಗಿತ್ತು. ಮುಂಗಾರು ಆರಂಭ ಮೇ ತಿಂಗಳಲ್ಲಿ ಶೇ.164 ರಷ್ಟು, ಜೂನ್ ತಿಂಗಳಿನಲ್ಲಿ ಶೇ.46ರಷ್ಟು ಮಳೆಯಾಗಿದೆ. ಆದರೆ, ಜುಲೈ ತಿಂಗಳಲ್ಲಿ ಶೇ.11 ರಷ್ಟು ಮಳೆಯ ಕೊರತೆ ಎದುರಾಗಿತ್ತು. ಸಕಲೇಶಪುರ ತಾಲ್ಲೂಕಿನಲ್ಲಿ ಮಾತ್ರ ಶೇ.37 ರಷ್ಟು ಹೆಚ್ಚುವರಿ ಮಳೆಯಾಗಿರುವುದನ್ನು ಬಿಟ್ಟರೆ, ಉಳಿದೆಲ್ಲಾ ತಾಲ್ಲೂಕುಗಳಲ್ಲಿ ಶೇ.10 ರಿಂದ 54ರಷ್ಟು ಮಳೆ ಕೊರತೆ ಕಂಡು ಬಂದಿದೆ. ಆಗಸ್ಟ್ ತಿಂಗಳಿನಲ್ಲಿ ಶೇ.10ರಷ್ಟು ಹೆಚ್ಚುವರಿ ಮಳೆಯಾಗಿದೆ. ಈ ತಿಂಗಳಲ್ಲಿ ಬಯಲುಸೀಮೆ ಪ್ರದೇಶವಾದ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಶೇ.131 ರಷ್ಟು, ಅರಸೀಕೆರೆ ತಾಲ್ಲೂಕಿನಲ್ಲಿ ಶೇ.68ರಷ್ಟು ಹೆಚ್ಚುವ ಮಳೆ ದಾಖಲಾಗಿದೆ.

ಸಕಲೇಶಪುರ ಪಟ್ಟಣ, ಹಾನುಬಾಳು, ಯಸಳೂರು ಹಾಗು ಹೆತ್ತೂರು ಹೋಬಳಿ ಭಾಗದಲ್ಲಿ ಹೆಚ್ಚಿನ ಪ್ರಮಾಣದ ಮಳೆ ಸುರಿದು ಮಲೆನಾಡು ತತ್ತರಗೊಂಡಿತ್ತು. ನಿರಂತರವಾಗಿ ಸುರಿದ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿದ್ದು ಮಾತ್ರವಲ್ಲದೇ, ಕೃಷಿಕರು, ಕಾರ್ಮಿಕರ ನಿತ್ಯ ಬದುಕು ದುಸ್ತರ ಎನ್ನುವಂತಾಗಿದೆ. ರಾಷ್ಟ್ರೀಯ ಹೆದ್ದಾರಿ-75ರ ಹಲವೆಡೆ ರಸ್ತೆ ಕುಸಿದು ವಾಹನ ಸವಾರರು ಪರದಾಡುವಂತಾಗಿತ್ತು. ವಿದ್ಯುತ್ ಕಂಬಗಳು ನೆಲಕ್ಕುರುಳಿ ಮಲೆನಾಡು ಭಾಗದ ಹಲವು

| (ಜಿಲ್ಲೆಯಲ್ಲಿ 5 ತಿಂಗಳಲ್ಲಿ ಸುರಿದ ಶೇಕಡಾವಾರು ಮಳೆ ಪ್ರಮಾಣ) | | | | | |
|---|---|---|---|---|---|
| ತಾಲ್ಲೂಕು | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ |
| ಸಕಲೇಶಪುರ | ಶೇ.25 | ಶೇ.459 | ಶೇ.163 | ಶೇ.37 | ಶೇ.53 |
| ಆಲೂರು | ಶೇ.23 | ಶೇ.123 | ಶೇ.41 | ಶೇ.19 | ಶೇ.3 |
| ಅರಕಲಗೂಡು | ಶೇ.34 | ಶೇ.167 | ಶೇ.14 | ಶೇ.27 | ಶೇ.8 |
| ಅರಸೀಕೆರೆ | ಶೇ.185 | ಶೇ.53 | ಶೇ.62 | ಶೇ.10 | ಶೇ.68 |
| ಬೇಲೂರು | ಶೇ.43 | ಶೇ. 113 | ಶೇ.22 | ಶೇ.27 | ಶೇ.23 |
| ಚನ್ನರಾಯಪಟ್ಟಣ | ಶೇ.94 | ಶೇ.66 | ಶೇ.35 | ಶೇ.25 | ಶೇ.131 |
| ಹಾಸನ | ಶೇ.63 | ಶೇ.69 | ಶೇ.18 | ಶೇ.54 | ಶೇ.8 |
| ಹೊಳೆನರಸೀಪುರ | ಶೇ.90 | ಶೇ.58 | ಶೇ.2 | ಶೇ.33 | ಶೇ.11 |
| ಒಟ್ಟು | ಶೇ.81 | ಶೇ. 164 | ಶೇ.46 | ಶೇ.11 | ಶೇ.10 |

ಗ್ರಾಮಗಳು ವಿದ್ಯುತ್ ಸಂಪರ್ಕ ಕಡಿತಗೊಂಡು ವಾರಗಟ್ಟಲೇ ಕತ್ತಲೆಯಲ್ಲೇ ಕಾಲ ಕಳೆಯುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಗ್ರಾಮೀಣ ರಸ್ತೆಗಳು ಹಾಳಾಗಿದ್ದು, ಪಟ್ಟಣಕ್ಕೆ ಬರುವ ಮಾರ್ಗಗಳು ಹಾಳಾದ್ದರಿಂದ ಸಂಚಾರಕ್ಕೆ ತೊಂದರೆಯಾಯಿತು.



| (ಮುಂಗಾರಿನಲ್ಲಿ ಸುರಿದ ಮಳೆ ಮಿಲಿ ಮೀಟರ್‌ಗಳಲ್ಲಿ) | | | |
|---|---|---|---|
| ತಾಲ್ಲೂಕು | ವಾಡಿಕೆ ಮಳೆ | ಸುರಿದ ಮಳೆ | ಹೆಚ್ಚುವರಿ ಮಳೆ |
| ಸಕಲೇಶಪುರ | 1794 | 3521 | ಶೇ.96 |
| ಆಲೂರು | 807 | 974 | ಶೇ.21 |
| ಅರಕಲಗೂಡು | 573 | 706 | ಶೇ.23 |
| ಅರಸೀಕೆರೆ | 351 | 474 | ಶೇ.35 |
| ಬೇಲೂರು | 665 | 836 | ಶೇ.26 |
| ಚನ್ನರಾಯಪಟ್ಟಣ | 345 | 496 | ಶೇ.44 |
| ಹಾಸನ | 503 | 523 | ಶೇ.4 |
| ಹೊಳೆನರಸೀಪುರ | 422 | 507 | ಶೇ.20 |
| ಒಟ್ಟು | 776 | 1044 | ಶೇ.35 |

**ಕಾಫಿ ಬೆಳೆಗೆ ಕಂಟಕ**

ಸಕಲೇಶಪುರ, ಬೇಲೂರು ಮತ್ತು ಆಲೂರು ಭಾಗದ ಕಾಫಿ ತೋಟಗಳಲ್ಲಿ ತೇವಾಂಶ ಹೆಚ್ಚಿರುವುದರಿಂದ ಕಾಫಿ ಗಿಡಗಳು, ಕಾಳು ಮೆಣಸು ಬಳ್ಳಿಯಲ್ಲಿ ಕೊಳೆರೋಗ ವ್ಯಾಪಕವಾಗಿ ಹರಡಿದೆ. ಇದರಿಂದ ಬೆಳೆಗಾರರು ಕಂಗಾಲಾಗಿದ್ದಾರೆ. ಮಳೆ ಇನ್ನೂ ಮುಂದುವರೆದರೆ ಅಪಾರ ಪ್ರಮಾಣದ ಬೆಳೆಗೆ ಹಾನಿಯಾಗಲಿದೆ.

# ಹೌದು! ತೆಂಗಿನಕಾಯಿಗಳು ಕುತೂಹಲಕಾರಿ ಭೂತಕಾಲವನ್ನು ಹೊಂದಿವೆ....



"ಭಾರತೀಯರ ಅಡುಗೆಯು ತೆಂಗಿನಕಾಯಿಯಿಲ್ಲದೇ ರುಚಿಸುವುದೇ ಇಲ್ಲ. ಪೂಜೆಯಿಂದ ಹಿಡಿದು ಆಹಾರ ತಯಾರಿಸುವವರೆಗೆ ಹೀಗೆ ಹಲವಾರು ಬಗೆಯಲ್ಲಿ ತೆಂಗಿನಕಾಯಿಯನ್ನು ಬಳಸಲಾಗುತ್ತದೆ. ಆದರೆ ಈ ತೆಂಗಿನ ಕಾಯಿಗೂ ಒಂದು ವಿಶೇಷ ದಿನವಿದ್ದು, ಸೆಪ್ಟೆಂಬರ್ 2 ರಂದು ವಿಶ್ವ ತೆಂಗು ದಿನವೆಂದು ಆಚರಿಸಲಾಗುತ್ತದೆ. ಬಹುಪಯೋಗಿಯಾಗಿರುವ ತೆಂಗಿನ ಕಾಯಿಯ ಮಹತ್ವವನ್ನು ತಿಳಿಸಲು ಈ ದಿನವನ್ನು ಆಚರಿಸಲಾಗುತ್ತಿದೆ. ಹಾಗಾದ್ರೆ ಈ ದಿನದ ಇತಿಹಾಸ ಹಾಗೂ ಮಹತ್ವದ ಬಗೆಗಿನ ಸಂಪೂರ್ಣ ಮಾಹಿತಿ ಇಲ್ಲಿದೆ.

ವಾರ್ಷಿಕವಾಗಿ ಸೆಪ್ಟೆಂಬರ್ 2 ರಂದು ಆಚರಿಸಲಾಗುವ ವಿಶ್ವ ತೆಂಗಿನಕಾಯಿ ದಿನವು ತೆಂಗಿನಕಾಯಿಯ ಜಾಗತಿಕ ಆಚರಣೆಯಾಗಿದೆ - ಇದು ಶತಮಾನಗಳಿಂದ ಅದರ ಬಹುಮುಖತೆ ಮತ್ತು ಹಲವಾರು ಪ್ರಯೋಜನಗಳಿಗಾಗಿ ಪೂಜಿಸಲ್ಪಡುವ ಒಂದು ಹಣ್ಣು. ಈ ದಿನವು ಕೃಷಿ, ಕೈಗಾರಿಕೆ ಮತ್ತು ಪಾಕಪದ್ಧತಿಯಲ್ಲಿ ತೆಂಗಿನಕಾಯಿಯ ಮಹತ್ವವನ್ನು ಎತ್ತಿ ತೋರಿಸುತ್ತದೆ, ಜೊತೆಗೆ ತೆಂಗಿನಕಾಯಿ ರೈತರು ಎದುರಿಸುತ್ತಿರುವ ಸವಾಲುಗಳು ಮತ್ತು ಸುಸ್ಥಿರ ತೆಂಗಿನಕಾಯಿ ಉತ್ಪಾದನಾ ಪದ್ಧತಿಗಳ ಅಗತ್ಯತೆಯ ಬಗ್ಗೆ ಜಾಗೃತಿ ಮೂಡಿಸುತ್ತದೆ.

ವಿಶ್ವ ತೆಂಗಿನಕಾಯಿ ದಿನದ ಇತಿಹಾಸ: ವಿಶ್ವ ತೆಂಗಿನಕಾಯಿ ದಿನವನ್ನು ಏಷ್ಯನ್ ಮತ್ತು ಪೆಸಿಫಿಕ್ ತೆಂಗಿನಕಾಯಿ ಸಮುದಾಯ (ಎಪಿಸಿಸಿ) ಸ್ಥಾಪಿಸಿತು, ಇದು ತೆಂಗಿನಕಾಯಿ ಉತ್ಪಾದಿಸುವ ದೇಶಗಳ ಅಂತರ ಸರ್ಕಾರಿ ಸಂಘಟನೆಯಾಗಿದೆ. ಆರ್ಥಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಲ್ಲಿ ತೆಂಗಿನಕಾಯಿಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ 2009 ರಲ್ಲಿ ಉದ್ಘಾಟನಾ ಆಚರಣೆ ನಡೆಯಿತು. 1969 ರಲ್ಲಿ ಸಂಸ್ಥೆಯ ಸ್ಥಾಪನಾ ದಿನಾಂಕವನ್ನು ಸ್ಮರಿಸಲು ಸೆಪ್ಟೆಂಬರ್ 2 ಅನ್ನು ಆಯ್ಕೆ ಮಾಡಿತು.

ಆರಂಭದಿಂದಲೂ, ವಿಶ್ವ ತೆಂಗಿನಕಾಯಿ ದಿನವು ಎಪಿಸಿಸಿ ಸದಸ್ಯ ರಾಷ್ಟ್ರಗಳನ್ನು ಮೀರಿ ಮನ್ನಣೆ ಗಳಿಸಿದೆ, ಜಾಗತಿಕ ಕಾರ್ಯಕ್ರಮವಾಗಿ ವಿಕಸನಗೊಂಡಿದೆ. ಪ್ರತಿ ವರ್ಷ, ತೆಂಗಿನಕಾಯಿ ಉದ್ಯಮದಲ್ಲಿನ ಪ್ರಸ್ತುತ ಸಮಸ್ಯೆಗಳನ್ನು ಪರಿಹರಿಸುವ ನಿರ್ದಿಷ್ಟ ವಿಷಯದೊಂದಿಗೆ ಈ ದಿನವನ್ನು ಆಚರಿಸಲಾಗುತ್ತದೆ, ಉದಾಹರಣೆಗೆ ಸುಸ್ಥಿರ ಕೃಷಿ ಪದ್ಧತಿಗಳು, ತಾಂತ್ರಿಕ ಆವಿಷ್ಕಾರಗಳು ಅಥವಾ ಮಾರುಕಟ್ಟೆ ಸವಾಲುಗಳು.

ತೆಂಗು ಉತ್ಪಾದಿಸುವ ರಾಷ್ಟ್ರಗಳು ಈ ದಿನವನ್ನು ಪ್ರದರ್ಶನಗಳು, ವಿಚಾರ ಸಂಕಿರಣಗಳು ಮತ್ತು ಕಾರ್ಯಾಗಾರಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಆಚರಿಸುತ್ತವೆ, ಇವುಗಳ ಮೂಲಕ ಸಾರ್ವಜನಿಕರಿಗೆ ತೆಂಗಿನ ಕೃಷಿ, ಸಂಸ್ಕರಣೆ ಮತ್ತು ಅದರ ಅಸಂಖ್ಯಾತ ಉಪಯೋಗಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಈ ದಿನವು ನೀತಿ ನಿರೂಪಕರು, ಸಂಶೋಧಕರು ಮತ್ತು ಉದ್ಯಮದ ಪಾಲುದಾರರಿಗೆ ತೆಂಗಿನಕಾಯಿ ವಲಯವನ್ನು ಮುನ್ನಡೆಸಲು ಮತ್ತು ವಿಶ್ವಾದ್ಯಂತ ಲಕ್ಷಾಂತರ ತೆಂಗಿನಕಾಯಿ ರೈತರ ಜೀವನೋಪಾಯವನ್ನು ಸುಧಾರಿಸಲು ತಂತ್ರಗಳನ್ನು ಚರ್ಚಿಸಲು ಒಂದು ವೇದಿಕೆಯಾಗಿಯೂ ಕಾರ್ಯನಿರ್ವಹಿಸುತ್ತದೆ.

**ವಿಶ್ವ ತೆಂಗಿನಕಾಯಿ ದಿನವನ್ನು ಆಚರಿಸಲು ಐಡಿಯಾಗಳು**

ವಿಶ್ವ ತೆಂಗಿನಕಾಯಿ ದಿನವು ಈ ಅದ್ಭುತ ಹಣ್ಣಿನ ಹಲವು ಅಂಶಗಳನ್ನು ಅನ್ವೇಷಿಸಲು ಮತ್ತು ಪ್ರಶಂಸಿಸಲು ಒಂದು ಅದ್ಭುತ ಅವಕಾಶವನ್ನು ನೀಡುತ್ತದೆ. ನೀವು ತೆಂಗಿನಕಾಯಿ ಉತ್ಸಾಹಿಯಾಗಿದ್ದರೂ ಅಥವಾ ಅದರ ಪ್ರಯೋಜನಗಳ ಬಗ್ಗೆ ಕುತೂಹಲ ಹೊಂದಿದ್ದರೂ, ಆಚರಣೆಯಲ್ಲಿ ಭಾಗವಹಿಸಲು ಹಲವಾರು ಮಾರ್ಗಗಳಿವೆ. ವಿಶ್ವ ತೆಂಗಿನಕಾಯಿ ದಿನದ ಸದುಪಯೋಗವನ್ನು ಪಡೆಯಲು ಕೆಲವು ವಿಚಾರಗಳು ಇಲ್ಲಿವೆ:

★ ತೆಂಗಿನಕಾಯಿ ಆಧಾರಿತ ಪಾಟ್‌ಲಕ್ ಅನ್ನು ಸ್ನೇಹಿತರೊಂದಿಗೆ ಆಯೋಜಿಸಿ, ವಿವಿಧ ರೂಪಗಳಲ್ಲಿ ತೆಂಗಿನಕಾಯಿಯನ್ನು ಒಳಗೊಂಡಿರುವ ಭಕ್ಷ್ಯಗಳನ್ನು ಒಳಗೊಂಡಿರುತ್ತದೆ.

★ ತೆಂಗಿನಕಾಯಿ ಚಿಪ್ಪಿನ ಕಲೆ ಅಥವಾ ಆಭರಣಗಳನ್ನು ತಯಾರಿಸುವ ಬಗ್ಗೆ ಕಲಿಯಲು ತೆಂಗಿನಕಾಯಿ ಕರಕುಶಲ ಕಾರ್ಯಾಗಾರಕ್ಕೆ ಹಾಜರಾಗಿ ಅಥವಾ ಆಯೋಜಿಸಿ.


★ ಮನೆಯಲ್ಲಿ ತಯಾರಿಸಿದ ತೆಂಗಿನ ಹಾಲು ಅಥವಾ ತೆಂಗಿನ ಎಣ್ಣೆಯಂತಹ ಹೊಸ ತೆಂಗಿನಕಾಯಿ ಆಧಾರಿತ ಪಾಕವಿಧಾನವನ್ನು ಪ್ರಯತ್ನಿಸಿ.

★ ನಿಮ್ಮ ತೋಟದಲ್ಲಿ ತೆಂಗಿನ ಮರವನ್ನು ನೆಡಿ ಅಥವಾ ಸ್ಥಳೀಯ ತೆಂಗಿನ ಮರ ನೆಡುವ ಉಪಕ್ರಮದಲ್ಲಿ ಭಾಗವಹಿಸಿ.

★ #WorldCoconutDay ಬಳಸಿಕೊಂಡು ಸಾಮಾಜಿಕ ಮಾಧ್ಯಮದಲ್ಲಿ ಆಸಕ್ತಿದಾಯಕ ತೆಂಗಿನಕಾಯಿ ಸಂಗತಿಗಳು ಮತ್ತು ಪಾಕವಿಧಾನಗಳನ್ನು ಹಂಚಿಕೊಳ್ಳಿ.

**ಪೌಷ್ಟಿಕಾಂಶದ ಶಕ್ತಿ ಕೇಂದ್ರ**

ತೆಂಗಿನಕಾಯಿಯನ್ನು ಬಹಳ ಹಿಂದಿನಿಂದಲೂ ಪೌಷ್ಟಿಕಾಂಶದ ಶಕ್ತಿ ಕೇಂದ್ರವೆಂದು ಪ್ರಶಂಸಿಸಲಾಗುತ್ತಿದೆ, ಇತ್ತೀಚಿನ ವರ್ಷಗಳಲ್ಲಿ ಅವು ಹೆಚ್ಚು ಜನಪ್ರಿಯವಾಗಲು ಕಾರಣವಾಗಿರುವ ಹಲವಾರು ಆರೋಗ್ಯ ಪ್ರಯೋಜನಗಳಿಂದ ತುಂಬಿವೆ. ಈ ಹಣ್ಣುಗಳಲ್ಲಿರುವ ಪೋಷಕಾಂಶಗಳು ಮತ್ತು ಸಂಯುಕ್ತಗಳ ವಿಶಿಷ್ಟ ಸಂಯೋಜನೆಯು ಸೂಪರ್‌ಫುಡ್ ಎಂಬ ಖ್ಯಾತಿಗೆ ಕಾರಣವಾಗಿದೆ.



ಎಳೆಯ ತೆಂಗಿನಕಾಯಿಯೊಳಗೆ ಕಂಡುಬರುವ ಸ್ಪಷ್ಟ ದ್ರವವಾದ ತೆಂಗಿನ ನೀರು ಎಲೆಕ್ಟ್ರೋಲೈಟ್‌ಗಳಲ್ಲಿ ಸಮೃದ್ಧವಾಗಿದ್ದು, ಇದು ಜಲಸಂಚಯನಕ್ಕೆ ಅತ್ಯುತ್ತಮವಾದ ನೈಸರ್ಗಿಕ ಕ್ರೀಡಾ ಪಾನೀಯವಾಗಿದೆ. ಇದು ಕಡಿಮೆ ಕ್ಯಾಲೋರಿಗಳನ್ನು ಹೊಂದಿದೆ ಮತ್ತು ಪೊಟ್ಯಾಸಿಯಮ್, ಮೆಗ್ನೀಸಿಯಮ್ ಮತ್ತು ಕ್ಯಾಲ್ಸಿಯಂನಂತಹ ಅಗತ್ಯ ಖನಿಜಗಳನ್ನು ಹೊಂದಿರುತ್ತದೆ.

ತೆಂಗಿನಕಾಯಿ ಮಾಂಸವು ಬಿಳಿ ಹಣ್ಣಿನ ತಿರುಳಾಗಿದ್ದು, ಫೈಬರ್ ಮತ್ತು ಆರೋಗ್ಯಕರ ಕೊಬ್ಬುಗಳಲ್ಲಿ, ವಿಶೇಷವಾಗಿ ಮಧ್ಯಮ ಸರಪಳಿ ಟ್ರೈಗ್ಲಿಸರೈಡ್‌ಗಳಲ್ಲಿ (ಎಮ್‌ಸಿಟಿಗಳು) ಅಧಿಕವಾಗಿದೆ. ಈ ಎಮ್‌ಸಿಟಿಗಳು ಚಯಾಪಚಯ ಕ್ರಿಯೆಯನ್ನು ಹೆಚ್ಚಿಸುತ್ತವೆ ಮತ್ತು ತೂಕ ನಿರ್ವಹಣೆಗೆ ಸಹಾಯ ಮಾಡುತ್ತವೆ ಎಂದು ನಂಬಲಾಗಿದೆ. ಹೆಚ್ಚುವರಿಯಾಗಿ, ಮಾಂಸದಿಂದ ಹೊರತೆಗೆಯಲಾದ ತೆಂಗಿನ ಎಣ್ಣೆಯು ಅದರ ಸಂಭಾವ್ಯ ಆಂಟಿಮೈಕ್ರೊಬಿಯಲ್ ಮತ್ತು ಉರಿಯೂತದ ಗುಣಲಕ್ಷಣಗಳಿಗಾಗಿ ಗಮನ ಸೆಳೆದಿದೆ.

ತೆಂಗಿನ ಎಣ್ಣೆಯಲ್ಲಿರುವ ಲಾರಿಕ್ ಆಮ್ಲವು ಹೆಚ್‌ಡಿಎಲ್ (ಉತ್ತಮ) ಕೊಲೆಸ್ಟ್ರಾಲ್ ಮಟ್ಟವನ್ನು ಹೆಚ್ಚಿಸುವ ಮೂಲಕ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಮತ್ತು ಹೃದಯದ ಆರೋಗ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ ಎಂದು ಕೆಲವು ಅಧ್ಯಯನಗಳು ಸೂಚಿಸುತ್ತವೆ.

ಆದಾಗ್ಯೂ, ತೆಂಗಿನ ಎಣ್ಣೆಯಲ್ಲಿ ಸ್ಯಾಚುರೇಟೆಡ್ ಕೊಬ್ಬು ಅಧಿಕವಾಗಿದೆ ಎಂಬುದನ್ನು ಗಮನಿಸುವುದು ಮುಖ್ಯ, ಆದ್ದರಿಂದ ಮಿತವಾಗಿರುವುದು ಮುಖ್ಯ. ಈ ಹಣ್ಣಿನಲ್ಲಿ ಆಂಟಿಆಕ್ಸಿಡೆಂಟ್‌ಗಳು ಸಹ ಇರುತ್ತವೆ, ಇದು ಸ್ವತಂತ್ರ ರಾಡಿಕಲ್‌ಗಳಿಂದ ಉಂಟಾಗುವ ಹಾನಿಯಿಂದ ಜೀವಕೋಶಗಳನ್ನು ರಕ್ಷಿಸಲು ಸಹಾಯ ಮಾಡುತ್ತದೆ. ತೆಂಗಿನಕಾಯಿ ಎಲ್ಲಾ ಆರೋಗ್ಯದ ಪರಿಣಾಮಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಹೆಚ್ಚಿನ ಸಂಶೋಧನೆ ಅಗತ್ಯವಿದ್ದರೂ, ಅದರ ಪೌಷ್ಟಿಕಾಂಶದ ಪ್ರೊಫೈಲ್ ಅದನ್ನು ಸಮತೋಲಿತ ಆಹಾರಕ್ಕೆ ಅಮೂಲ್ಯವಾದ ಸೇರ್ಪಡೆಯನ್ನಾಗಿ ಮಾಡುತ್ತದೆ.

**ಸುಸ್ಥಿರ ಅಭಿವೃದ್ಧಿಯಲ್ಲಿ ತೆಂಗಿನಕಾಯಿಯ ಪಾತ್ರ**

ತೆಂಗಿನಕಾಯಿಗಳು ಸುಸ್ಥಿರ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ, ಪ್ರಪಂಚದಾದ್ಯಂತ ಸಮುದಾಯಗಳಿಗೆ ಪರಿಸರ, ಆರ್ಥಿಕ ಮತ್ತು ಸಾಮಾಜಿಕ ಪ್ರಯೋಜನಗಳನ್ನು ನೀಡುತ್ತವೆ. ಅನೇಕ ಉಷ್ಣವಲಯದ ಪ್ರದೇಶಗಳಲ್ಲಿ ಜೀವನದ ಮರ ಎಂದು ಕರೆಯಲ್ಪಡುವ ತೆಂಗಿನಕಾಯಿಯ ಪ್ರತಿಯೊಂದು ಭಾಗವನ್ನು ಬಳಸಿಕೊಳ್ಳಬಹುದು, ಇದು ಸಂಪನ್ಮೂಲದಕ್ಷ ಸುಸ್ಥಿರ ಬೆಳೆಯನ್ನಾಗಿ ಮಾಡುತ್ತದೆ. ಹಣ್ಣು ಸ್ವತಃ ಆಹಾರ ಮತ್ತು ಪಾನೀಯವನ್ನು ಒದಗಿಸುತ್ತದೆ, ಆದರೆ ಸಿಪ್ಪೆ ಮತ್ತು ಚಿಪ್ಪುಗಳನ್ನು ಇಂಧನ, ನಾರು ಮತ್ತು ವಿವಿಧ ಪರಿಸರ ಸ್ನೇಹಿ ಉತ್ಪನ್ನಗಳಿಗೆ ಬಳಸಬಹುದು.

ತೆಂಗಿನ ನಾರನ್ನು ನಾರಿನ ಸಿಪ್ಪೆಯಿಂದ ಪಡೆಯಲಾಗಿದ್ದು, ಇದನ್ನು ಸಸ್ಯದ ಕುಂಡಗಳು ಮತ್ತು ಸವೆತ ನಿಯಂತ್ರಣ ಮ್ಯಾಟ್ ಗಳಂತಹ ಉತ್ಪನ್ನಗಳಲ್ಲಿ ಪ್ಲಾಸ್ಟಿಕ್ ಗೆ ಜೈವಿಕ ವಿಘಟನೀಯ ಪರ್ಯಾಯವಾಗಿ ಹೆಚ್ಚಾಗಿ ಬಳಸಲಾಗುತ್ತಿದೆ. ಪರಿಸರದ ಪ್ರಭಾವದ ದೃಷ್ಟಿಯಿಂದ, ತೆಂಗಿನ ಮರಗಳು ಅತ್ಯುತ್ತಮ ಇಂಗಾಲ ಸಿಂಕ್‌ಗಳಾಗಿವೆ, ವಾತಾವರಣದಿಂದ ಗಮನಾರ್ಹ ಪ್ರಮಾಣದ ಸಿಒ2 ಅನ್ನು ಹೀರಿಕೊಳ್ಳುತ್ತವೆ. ಅವು ಮಣ್ಣಿನ ಸವೆತವನ್ನು ತಡೆಯಲು ಸಹಾಯ ಮಾಡುತ್ತವೆ ಮತ್ತು ಜೀವವೈವಿಧ್ಯತೆಯನ್ನು ಉತ್ತೇಜಿಸುವ ಕೃಷಿ ಅರಣ್ಯ ವ್ಯವಸ್ಥೆಗಳ ಭಾಗವಾಗಬಹುದು.

ಆರ್ಥಿಕವಾಗಿ, ತೆಂಗಿನಕಾಯಿ ಉದ್ಯಮವು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಲಕ್ಷಾಂತರ ಸಣ್ಣ ಹಿಡುವಳಿದಾರ ರೈತರಿಗೆ ಬೆಂಬಲ ನೀಡುತ್ತದೆ, ಗ್ರಾಮೀಣ ಸಮುದಾಯಗಳಿಗೆ ಆದಾಯದ ಪ್ರಮುಖ ಮೂಲವನ್ನು ಒದಗಿಸುತ್ತದೆ. ಜಾಗತಿಕವಾಗಿ ತೆಂಗಿನಕಾಯಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾದಂತೆ, ರೈತರಿಗೆ ನ್ಯಾಯಯುತ ವೇತನವನ್ನು ಖಾತ್ರಿಪಡಿಸುವ ಮತ್ತು ಜವಾಬ್ದಾರಿಯುತ ಕೃಷಿ ಪದ್ಧತಿಗಳನ್ನು ಉತ್ತೇಜಿಸುವ ಸುಸ್ಥಿರ ಪೂರೈಕೆ ಸರಪಳಿಗಳನ್ನು ಅಭಿವೃದ್ಧಿಪಡಿಸುವತ್ತ ಹೆಚ್ಚಿನ ಗಮನ ಹರಿಸಲಾಗುತ್ತಿದೆ.

ಆದಾಗ್ಯೂ, ಉದ್ಯಮದ ದೀರ್ಘಕಾಲೀನ ಸುಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು, ತೆಂಗಿನ ತೋಟಗಳ ವಯಸ್ಸಾಗುವಿಕೆ ಮತ್ತು ಬೆಳೆ ಇಳುವರಿಯ ಮೇಲೆ ಹವಾಮಾನ ಬದಲಾವಣೆಯ ಪ್ರಭಾವದಂತಹ ಸವಾಲುಗಳನ್ನು ಪರಿಹರಿಸಬೇಕಾಗಿದೆ. ಅಂತರ ಬೆಳೆ, ಸಾವಯವ ಕೃಷಿ ವಿಧಾನಗಳು ಮತ್ತು ರೋಗ-ನಿರೋಧಕ ತೆಂಗಿನ ಪ್ರಭೇದಗಳ ಅಭಿವೃದ್ಧಿಯನ್ನು ಉತ್ತೇಜಿಸುವ ಉಪಕ್ರಮಗಳು ಹೆಚ್ಚು ಸುಸ್ಥಿರ ಭವಿಷ್ಯಕ್ಕಾಗಿ ವಲಯವು ಕೆಲಸ ಮಾಡುತ್ತಿರುವ ಕೆಲವು ಮಾರ್ಗಗಳಾಗಿವೆ.

## ತೆಂಗಿನಕಾಯಿ ಸೇವನೆಯಿಂದ ಆರೋಗ್ಯದಲ್ಲಾಗುತ್ತೆ ಮ್ಯಾಜಿಕ್

- ಕಲ್ಪವೃಕ್ಷ ಎಂದು ಕರೆಯಲಾಗುವ ತೆಂಗು ಬಹುಪಯೋಗಿಯಾಗಿದ್ದು, ಈ ಮರದ ಪ್ರತಿಯೊಂದು ಭಾಗವು ಉಪಯೋಗಕ್ಕೆ ಬರುತ್ತದೆ ಅದಲ್ಲದೇ, ಭಾರತೀಯರಿಗೆ ಅಚ್ಚುಮೆಚ್ಚಾಗಿದ್ದು ತೆಂಗು ಇಲ್ಲದೇ ಯಾವ ಅಡುಗೆಯು ರುಚಿಸುವುದಿಲ್ಲ. ಪ್ರಪಂಚದಾದ್ಯಂತ ವಿವಿಧ ಭಕ್ಷ್ಯಗಳ ತಯಾರಿಕೆಯಲ್ಲಿ ಬಳಸುವ ತೆಂಗಿನಕಾಯಿ ಆರೋಗ್ಯಕ್ಕೂ ಉತ್ತಮವಾಗಿದ್ದು ಇದರ ಮಹತ್ವ ತಿಳಿಸಲು ಸೆಪ್ಟೆಂಬರ್ 2 ರಂದು ವಿಶ್ವ ತೆಂಗು ದಿನವನ್ನು ಆಚರಿಸಲಾಗುತ್ತದೆ.

## ತೆಂಗಿನಕಾಯಿಯ ಸೇವನೆಯಿಂದಾಗುವ ಆರೋಗ್ಯ ಪ್ರಯೋಜನಗಳು

- ತೆಂಗಿನಕಾಯಿಯಲ್ಲಿ ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್, ಹಲವಾರು ಪ್ರಮುಖ ಖನಿಜಗಳು ಮತ್ತು ಸಣ್ಣ ಪ್ರಮಾಣದ ಬಿ ಜೀವಸತ್ವಗಳು ಇವೆ. ತೆಂಗಿನಕಾಯಿಯಲ್ಲಿ ಮ್ಯಾಂಗನೀಸ್ ಅಧಿಕವಾಗಿದ್ದು, ಇದು ಮೂಳೆಗಳ ಆರೋಗ್ಯವನ್ನು ಕಾಪಾಡುತ್ತದೆ. ಅದಲ್ಲದೇ ಇದರಲ್ಲಿರುವ ನಾರಿನಾಂಶವು ಚಯಾಪಚಯ ಕ್ರಿಯೆಯನ್ನು ಸುಧಾರಿಸುತ್ತದೆ.
- ಒಣ ಕೊಬ್ಬರಿಯಿಂದ ತಯಾರಿಸಿದ ಶುದ್ಧ ತೆಂಗಿನ ಎಣ್ಣೆಯನ್ನು ಸೇವಿಸುವುದರಿಂದ ಹೊಟ್ಟೆಯ ಕೊಬ್ಬನ್ನು ಕಡಿಮೆ ಮಾಡುತ್ತದೆ. ಈ ತೆಂಗಿನೆಣ್ಣೆಯ ಸೇವನೆಯು ಕೊಲೆಸ್ಟ್ರಾಲ್ ಮಟ್ಟವನ್ನು ತಗ್ಗಿಸಿ ಹೃದಯದ ಆರೋಗ್ಯವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
- ತೆಂಗಿನಕಾಯಿಯಲ್ಲಿ ಕಡಿಮೆ ಪ್ರಮಾಣದ ಕಾರ್ಬೋಹೈಡ್ರೇಟ್‌ಗಳು ಹಾಗೂ ಫೈಬರ್ ಮತ್ತು ಕೊಬ್ಬಿನ ಅಂಶಗಳು ಅಧಿಕವಾಗಿದೆ. ಇದು ರಕ್ತದಲ್ಲಿನ ಸಕ್ಕರೆಯ ಅಂಶವನ್ನು ನಿಯಂತ್ರಿಸಿ ಆರೋಗ್ಯವನ್ನು ಕಾಪಾಡಲು ಸಹಕಾರಿಯಾಗಿದೆ.
- ತೆಂಗಿನಕಾಯಿ ಬ್ಯಾಕ್ಟೀರಿಯಾ ವಿರೋಧಿ ಮತ್ತು ಆಂಟಿವೈರಸ್ ಗುಣಲಕ್ಷಣಗಳನ್ನು ಹೊಂದಿರುತ್ತದೆ. ಅದಲ್ಲದೇ, ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಗುಣವನ್ನು ಹೊಂದಿದ್ದು, ಕೋಶಗಳನ್ನು ಹಾನಿಯಿಂದ ರಕ್ಷಿಸಿ ಆರೋಗ್ಯ ಸಮಸ್ಯೆ ಬಾರದಂತೆ ತಡೆಯುತ್ತದೆ.
- ನಿಯಮಿತವಾದ ತೆಂಗಿನ ಕಾಯಿ ಸೇವನೆಯು ಒಣ ಚರ್ಮ ಮತ್ತು ಕೂದಲು ಉದುರುವುದು ಹೀಗೆ ಇನ್ನಿತ್ತರ ಸಮಸ್ಯೆಗೆ ಪರಿಹಾರವನ್ನು ನೀಡುತ್ತದೆ. ಚರ್ಮದಲ್ಲಿನ ತೇವಾಂಶ ಹೆಚ್ಚಿಸುವುದಲ್ಲದೆ ಚರ್ಮದ ಆರೋಗ್ಯವನ್ನು ಕಾಪಾಡಲು ಸಹಕಾರಿಯಾಗಿದೆ.

## 02-9-2025 ದಿನ ಭವಿಷ್ಯ

**ಮೇಷ:** ನಿಮ್ಮ ಸುತ್ತಲಿನ ಸುಮಾರು ತುಂಬ ಬೇಡಿಕೆಯಿಡುತ್ತಾರೆಂದು ನಿಮಗನಿಸುತ್ತದೆ-ನಿಮಗೆ ಸಾಧ್ಯವಿರುವುದಕ್ಕಿಂತ ಹೆಚ್ಚು ಮಾಡಲು ಒಪ್ಪಿಕೊಳ್ಳಬೇಡಿ - ಮತ್ತು ಇತರರನ್ನು ಸಂತೋಷಪಡಿಸಲು ನಿಮ್ಮ ಮೇಲೆ ಒತ್ತಡ ಹಾಕಬೇಡಿ. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ.

**ವೃಷಭ:** ಆರೋಗ್ಯ ಚೆನ್ನಾಗಿರುತ್ತದೆ. ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು. ನೀವು ನಂಬುವ ಯಾರಾದರೂ ನಿಮಗೆ ಸಂಪೂರ್ಣ ನಿಜ ಹೇಳದಿರಬಹುದು - ಇತರರು ಮನಮೊಲಿಸುವ ನಿಮ್ಮ ಸಾಮರ್ಥ್ಯ ಬರುವ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ. ಇಂದು ನಿಮ್ಮ ಕೆಟ್ಟ ಅಭ್ಯಾಸಗಳು ನಿಮ್ಮ ಪ್ರೇಮಿಗೆ ಕೆಟ್ಟ ಭಾವನೆ ಉಂಟುಮಾಡಬಹುದು

**ಮಿಥುನ:** ನಿಮ್ಮ ಹಠಾತ್ ಮತ್ತು ಹಠಮಾರಿ ಪ್ರವೃತ್ತಿಯನ್ನು ವಿಶೇಷವಾಗಿ ಪಾರ್ಟಿಗಳಲ್ಲಿ ನಿಯಂತ್ರಿಸಲು ಪ್ರಯತ್ನಿಸಿ ಏಕೆಂದರೆ ಇದು ಪಕ್ಷದ ಮೂಡ್ ಹಾಳು ಮಾಡಬಹುದು. ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ. ದೂರದ ಸಂಬಂಧಿಗಳಿಂದ ಅನಿರೀಕ್ಷಿತವಾದ ಒಳ್ಳೆಯ ಸುದ್ದಿ ಇಡೀ ಕುಟುಂಬಕ್ಕೆ ಸಂತೋಷದ ಕ್ಷಣಗಳನ್ನು ತರುವುದು.

**ಕರ್ಕಾಟಕ:** ವಯಸ್ಸಾದವರು ತಮ್ಮ ಆರೋಗ್ಯವನ್ನು ನೋಡಿಕೊಳ್ಳಬೇಕು. ಊಹೆಗಳು ಲಾಭ ತರುತ್ತವೆ. ಮಕ್ಕಳು ಹೆಚ್ಚು ಗಮನ ಬಯಸಿದರೂ ಬೆಂಬಲ ಮತ್ತು ಕಾಳಜಿಯಿಂದ ವರ್ತಿಸುತ್ತಾರೆ. ನಿಮ್ಮ ಪ್ರೀತಿಪಾತ್ರರ ಅನಗತ್ಯ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಡಿ. ಕೆಲಸದಲ್ಲಿ, ನೀವು ಉತ್ತಮ ಬದಲಾವಣೆಯನ್ನು ಅನುಭವಿಸಬಹುದು.

**ಸಿಂಹ:** ಯೋಗ ಮತ್ತು ಧ್ಯಾನ ನೀವು ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ. ಈ ರಾಶಿಚಕ್ರದ ಕೆಲವರು ಇಂದು ಭೂಮಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಹಣವನ್ನು ಖರ್ಚು ಮಾಡಬೇಕಾಗಬಹುದು. ಇತರರ ಸಲಹೆಗಳನ್ನು ಕೇಳುವುದು ಮತ್ತು ಕಾರ್ಯಗತಗೊಳಿಸುವುದು ಪ್ರಮುಖವಾದ ಒಂದು ದಿನ.

ಕನ್ಯಾ: ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಯಾವುದಾದರೂ ಸಾಮಾಜಿಕ ಸಭೆಗೆ ಹಾಜರಾಗಿ. ಯಶಸ್ಸಿಗೆ ಇಂದಿನ ಸೂತ್ರವೆಂದರೆ ನಾವೀನ್ಯತೆಯಿರವ ಮತ್ತು ಉತ್ತಮ ಅನುಭವ ಹೊಂದಿರುವ ಜನರ ಸಲಹೆಯಂತೆ ನಿಮ್ಮ ಹಣವನ್ನು ಹೂಡುವುದಾಗಿದೆ. ಕುಟುಂಬದ ಸದಸ್ಯರೊಂದಿಗಿನ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುವ ಮೂಲಕ ಗುರಿಗಳನ್ನು ಸುಲಭವಾಗಿ ಸಾಧಿಸುತ್ತೀರಿ.

ತುಲಾ: ಗಾಳಿಯಲ್ಲಿ ಮನೆ ಕಟ್ಟುವಲ್ಲಿ ನಿಮ್ಮ ಸಮಯ ವ್ಯರ್ಥ ಮಾಡಬೇಡಿ. ಬದಲಿಗೆ ಏನಾದರೂ ಅರ್ಥಪೂರ್ಣವಾದದ್ದನ್ನು ಮಾಡಲು ನಿಮ್ಮ ಶಕ್ತಿ ವ್ಯಯಿಸಿ. ಹಣಕಾಸು ಲಾಭಗಳು ವಿವಿಧ ಮೂಲಗಳಿಂದ ಬರುತ್ತದೆ. ನೀವು ಬಾಕಿಯಿರುವ ಎಲ್ಲಾ ಕುಟುಂಬದ ಸಾಲಗಳನ್ನು ತೀರಿಸಲು ಸಾಧ್ಯವಾಗುತ್ತದೆ.

**ವೃಶ್ಚಿಕ:** ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸಿ ನಿಮ್ಮ ಬಗ್ಗೆ ನೀವೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ ಇದನ್ನು ದಿನವೂ ಮಾಡುವುದನ್ನು ರೂಢಿ ಮಾಡಿಕೊಳ್ಳಿ ಹಾಗೂ ಅದನ್ನು ಕಟ್ಟುನಿಟ್ಟಾಗಿ ಅನುಸರಿಸಿ. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು. ಪ್ರೀತಿಪಾತ್ರರೊಡನೆ ಸಿಹಿತಿಂಡಿ ಮತ್ತು ಮಿಠಾಯಿ ಹಂಚಿಕೊಳ್ಳುವ ಸಾಧ್ಯತೆಯಿದೆ

**ಧನು:** ವಿಶೇಷವಾಗಿ ಹೃದಯ ರೋಗಿಗಳು ಕಾಫಿಯನ್ನು ಬಿಡಬೇಕು. ಹಣಕಾಸು ಖಂಡಿತವಾಗಿಯೂ ವೃದ್ಧಿಯಾಗುತ್ತದೆ - ಆದರೆ ಅದೇ ಸಮಯದಲ್ಲಿ ಖರ್ಚೂ ತುಂಬಾ ಹೆಚ್ಚಾಗುತ್ತದೆ. ಕುಟುಂಬದ ಪರಿಸ್ಥಿತಿ ಇಂದು ನೀವು ಯೋಚಿಸುವ ಹಾಗೆ ಇರುವುದಿಲ್ಲ. ಇಂದು ಮನೆಯಲ್ಲಿ ಯಾವುದೇ ವಿಷಯದ ಬಗ್ಗೆ ಅಪಶೃತಿ ಉಂಟಾಗುವ ಸಾಧ್ಯತೆ ಇದೆ. ಅಂತಹ ಪರಿಸ್ಥಿಯಲ್ಲಿ ನಿಮ್ಮನ್ನು ನಿಯಂತ್ರಿಸಿ.

**ಮಕರ:** ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವುದನ್ನು ಮಾಡಲು ಪ್ರಯತ್ನಿಸಿ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ. ಯಾರಾದರೂ ನಿಮ್ಮ ಹೆಸರು ಕೆಡಿಸಲು ಪ್ರಯತ್ನಿಸಬಹುದದ್ದರಿಂದ ಜಾಗರೂಕರಾಗಿರಿ.

**ಕುಂಭ:** ಒತ್ತಡ ತೊಡೆದುಹಾಕಲು ನಿಮ್ಮ ಮಕ್ಕಳ ಜೊತೆ ನಿಮ್ಮ ಅಮೂಲ್ಯ ಸಮಯ ಕಳೆಯಿರಿ. ನೀವು ಮಗುವಿನ ಗುಣಪಡಿಸುವ ಶಕ್ತಿಯನ್ನು ಅನುಭವಿಸುತ್ತೀರಿ. ಅವರು ಭೂಮಿಯ ಮೇಲೆ ಅತ್ಯಂತ ಶಕ್ತಿಯುತ ಆಧ್ಯಾತ್ಮಿಕ ಮತ್ತು ಭಾವನಾತ್ಮಕ ವ್ಯಕ್ತಿತ್ವವಾಗಿರುತ್ತಾರೆ. ನೀವೇ ಮರುಚೈತನ್ಯ ಹೊಂದುತ್ತೀರಿ. ಇಂದು ಅನುಭವಿಗಳ ಒಡನಾಟ ಹೊಂದಿ ಮತ್ತು ಅವರು ಏನು ಹೇಳುತ್ತಾರೆಂದು ಕಲಿಯಿರಿ.

**ಮೀನ:** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ನೀವು ಜೀವನದಲ್ಲಿ ಹಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ ಆದರೆ ಇಂದು ನೀವು ಹಣದ ಮೌಲ್ಯವನ್ನು ಅರ್ಥಮಾಡಿಕೊಳ್ಳಬಹುದು ಏಕೆಂದರೆ ಇಂದು ನಿಮಗೆ ಹಣದ ಅಗತ್ಯವಿರುತ್ತದೆ ಆದರೆ ನಿಮ್ಮ ಸಾಕಷ್ಟು ಹಣ ಇರುವುದಿಲ್ಲ. ನಿಮ್ಮ ಸಂಗಾತಿಯ ಜೊತೆ ಗಂಭೀರವಾದ ವಾದಹೊಂದಿರಬಹುದು.

# ವಾಯು ಮಾಲಿನ್ಯದಿಂದ ಭಾರತೀಯರ ಜೀವಿತಾವಧಿ 5.3 ವರ್ಷ ಕಡಿಮೆಯಾಗಿದೆ

### ಎಕ್ಯೂಎಲ್‌ಐ ವರದಿ

- ಪ್ರತಿಯೊಬ್ಬ ಭಾರತೀಯನು ಡಬ್ಲ್ಯೂಹೆಚ್‌ಓ ಮಾನದಂಡಗಳಿಗಿಂತ ಮಾಲಿನ್ಯದ ಮಟ್ಟ ಹೆಚ್ಚಿರುವ ಪ್ರದೇಶಗಳಲ್ಲಿ ವಾಸಿಸುತ್ತಾನೆ.
- 67.4% ಜನರು ಭಾರತದ ಸ್ವಂತ ವಾಯು ಗುಣಮಟ್ಟದ ಮಾನದಂಡವನ್ನು ಮೀರಿದ ಸ್ಥಳಗಳಲ್ಲಿ ವಾಸಿಸುತ್ತಿದ್ದಾರೆ.
- 1998 ರಿಂದ 2021 ರವರೆಗೆ, ಮಾಲಿನ್ಯವು 67.7% ರಷ್ಟು ಏರಿಕೆಯಾಗಿದ್ದು, ಜೀವಿತಾವಧಿಯಲ್ಲಿ 2.3 ವರ್ಷಗಳನ್ನು ಕಡಿತಗೊಳಿಸಿದೆ.
- 2013 ಮತ್ತು 2021 ರ ನಡುವೆ, ವಿಶ್ವದ ಮಾಲಿನ್ಯ ಹೆಚ್ಚಳದ 59.1% ಭಾರತದಿಂದ ಬಂದಿದೆ.
- ಗಾಳಿಯು ಡಬ್ಲ್ಯೂಹೆಚ್‌ಓ ಮಾರ್ಗಸೂಚಿಗಳನ್ನು ಪೂರೈಸಿದರೆ, ದೆಹಲಿ ನಿವಾಸಿಗಳು 11.9 ವರ್ಷ ಜೀವಿತಾವಧಿಯನ್ನು ಪಡೆಯಬಹುದು ಮತ್ತು ಉತ್ತರ 24 ಪರಗಣಗಳ ಜನರು 5.6 ವರ್ಷ ಜೀವಿತಾವಧಿಯನ್ನು ಪಡೆಯಬಹುದು.

ದಕ್ಷಿಣ ಏಷ್ಯಾ ವಿಶ್ವದ ಅತ್ಯಂತ ಕಲುಷಿತ ಪ್ರದೇಶವಾಗಿ ಉಳಿದಿದೆ, ನಾಲ್ಕು ಅತ್ಯಂತ ಕಲುಷಿತ ದೇಶಗಳಿಗೆ ನೆಲೆಯಾಗಿದೆ: ಬಾಂಗ್ಲಾದೇಶ, ಭಾರತ, ನೇಪಾಳ ಮತ್ತು ಪಾಕಿಸ್ತಾನ. ಪ್ರಸ್ತುತ ಮಾಲಿನ್ಯದ ಮಟ್ಟಗಳು ಮುಂದುವರಿದರೆ ಇಲ್ಲಿನ ಜನರು ಸರಾಸರಿ ಐದು ವರ್ಷಗಳ ಜೀವಿತಾವಧಿಯನ್ನು ಕಳೆದುಕೊಳ್ಳುವ ನಿರೀಕ್ಷೆಯಿದೆ.

ಭಾರತದಲ್ಲಿ ವಾಯು ಮಾಲಿನ್ಯವು ಈಗ ಮಾನವನ ಆರೋಗ್ಯಕ್ಕೆ ಅತಿದೊಡ್ಡ ಬೆದರಿಕೆಯಾಗಿದ್ದು, ಸರಾಸರಿ ಭಾರತೀಯನ ಜೀವಿತಾವಧಿಯನ್ನು 5.3 ವರ್ಷಗಳಷ್ಟು ಕಡಿಮೆ ಮಾಡುತ್ತದೆ ಎಂದು ಚಿಕಾಗೋ ವಿಶ್ವವಿದ್ಯಾಲಯದ ಇಂಧನ ನೀತಿ ಸಂಸ್ಥೆಯ (ಇಪಿಐಸಿ) ವಾಯು ಗುಣಮಟ್ಟ ಜೀವನ ಸೂಚ್ಯಂಕ (ಎಕ್ಯೂಎಲ್‌ಐ) ವರದಿ ತಿಳಿಸಿದೆ.

ಕೊಳಕು ಗಾಳಿಯಿಂದ ಉಂಟಾಗುವ ಹಾನಿ ಧೂಮಪಾನ, ಮದ್ಯಪಾನ, ಅಸುರಕ್ಷಿತ ನೀರು ಅಥವಾ ರಸ್ತೆ ಅಪಘಾತಗಳಿಗಿಂತಲೂ ಕೆಟ್ಟದ್ದಾಗಿದೆ ಎಂದು ಅಧ್ಯಯನವು ಎಚ್ಚರಿಸಿದೆ.

ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯೂಹೆಚ್‌ಓ) ಮಾರ್ಗಸೂಚಿಗಳನ್ನು ಪೂರೈಸಲು ಸೂಕ್ಷ್ಮ ಕಣಗಳ ಮಾಲಿನ್ಯವನ್ನು (ಪಿಎಮ್2.5) ಶಾಶ್ವತವಾಗಿ ಕಡಿಮೆ ಮಾಡಿದರೆ, ವಿಶ್ವಾದ್ಯಂತ ಸರಾಸರಿ ವ್ಯಕ್ತಿ 2.3 ಹೆಚ್ಚುವರಿ ಜೀವಿತಾವಧಿಯನ್ನು ಪಡೆಯುತ್ತಾನೆ, ಅಂದರೆ ಜಾಗತಿಕವಾಗಿ ಒಟ್ಟು 17.8 ಶತಕೋಟಿ ಜೀವಿತಾವಧಿಯನ್ನು ಉಳಿಸಬಹುದು ಎಂದು ವರದಿ ಹೇಳುತ್ತದೆ.

ವಾಯು ಮಾಲಿನ್ಯವು ಜಾಗತಿಕ ಜೀವಿತಾವಧಿಯ ಮೇಲೆ ಬೀರುವ ಪರಿಣಾಮದ ಮುಕ್ಕಾಲು ಭಾಗವು ಕೇವಲ ಆರು ದೇಶಗಳಲ್ಲಿ ಸಂಭವಿಸುತ್ತದೆ. ಬಾಂಗ್ಲಾದೇಶ, ಭಾರತ, ಪಾಕಿಸ್ತಾನ, ಚೀನಾ, ನೈಜೀರಿಯಾ ಮತ್ತು ಇಂಡೋನೇಷ್ಯಾ ಅಲ್ಲಿ ಜನರು ಉಸಿರಾಡುವ ಗಾಳಿಯಿಂದಾಗಿ ಒಂದು ವರ್ಷದಿಂದ ಆರು ವರ್ಷಗಳಿಗಿಂತ ಹೆಚ್ಚು ಕಾಲ ತಮ್ಮ ಜೀವಿತಾವಧಿಯನ್ನು ಕಳೆದುಕೊಳ್ಳುತ್ತಾರೆ ಎಂದು ಅರ್ಥಶಾಸ್ತ್ರದ ವಿಶಿಷ್ಟ ಸೇವಾ ಪ್ರಾಧ್ಯಾಪಕ ಮತ್ತು ಎಕ್ಯೂಎಲ್‌ಐ ಸೃಷ್ಟಿಕರ್ತ ಮೈಕೆಲ್ ಗ್ರೀನ್‌ಸ್ಟೋನ್ ಹೇಳಿದರು.

ದಕ್ಷಿಣ ಏಷ್ಯಾ, ಅತ್ಯಂತ ಮಾರಕ ಪ್ರದೇಶ.

ದಕ್ಷಿಣ ಏಷ್ಯಾ ವಿಶ್ವದ ಅತ್ಯಂತ ಕಲುಷಿತ ಪ್ರದೇಶವಾಗಿ ಉಳಿದಿದೆ, ನಾಲ್ಕು ಅತ್ಯಂತ ಕಲುಷಿತ ದೇಶಗಳಿಗೆ ನೆಲೆಯಾಗಿದೆ; ಬಾಂಗ್ಲಾದೇಶ, ಭಾರತ, ನೇಪಾಳ ಮತ್ತು ಪಾಕಿಸ್ತಾನ. ಪ್ರಸ್ತುತ ಮಾಲಿನ್ಯದ ಮಟ್ಟಗಳು ಮುಂದುವರಿದರೆ ಇಲ್ಲಿನ ಜನರು ಸರಾಸರಿ ಐದು ವರ್ಷಗಳ ಜೀವಿತಾವಧಿಯನ್ನು ಕಳೆದುಕೊಳ್ಳುವ ನಿರೀಕ್ಷೆಯಿದೆ.

ಮಾಲಿನ್ಯವು ಅತ್ಯಂತ ಕೆಟ್ಟದಾಗಿರುವ ಭಾರತದ ಉತ್ತರ ಬಯಲು ಪ್ರದೇಶಗಳಲ್ಲಿ, ಡಬ್ಲ್ಯೂಹೆಚ್‌ಓ ಮಾನದಂಡಗಳಿಗೆ ಹೋಲಿಸಿದರೆ 521 ದಶಲಕ್ಷಕ್ಕೂ ಹೆಚ್ಚು ಜನರು ಎಂಟು ವರ್ಷಗಳ ಜೀವಿತಾವಧಿಯನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ.

ಭಾರತ ಸರ್ಕಾರವು 2019ರಲ್ಲಿ ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮವನ್ನು (ಎನ್‌ಸಿಎಪಿ) ಪ್ರಾರಂಭಿಸಿತು, 2024 ರ ವೇಳೆಗೆ ಮಾಲಿನ್ಯವನ್ನು 20-30% ರಷ್ಟು ಕಡಿತಗೊಳಿಸುವ ಗುರಿಯನ್ನು ಹೊಂದಿದೆ. 2022ರಲ್ಲಿ, ಈ ಗುರಿಯನ್ನು 131 ಹೆಚ್ಚು ಕಲುಷಿತ ನಗರಗಳಲ್ಲಿ 2026ರ ವೇಳೆಗೆ 40% ಕಡಿತಕ್ಕೆ ಪರಿಷ್ಕರಿಸಲಾಯಿತು.



ಈ ಗುರಿಯನ್ನು ತಲುಪುವುದರಿಂದ ಭಾರತದ ಸರಾಸರಿ ಜೀವಿತಾವಧಿ 7.9 ತಿಂಗಳು ಹೆಚ್ಚಾಗಬಹುದು ಮತ್ತು ದೇಶದ ಅತ್ಯಂತ ಕಲುಷಿತ ನಗರವಾದ ದೆಹಲಿಯಲ್ಲಿ ನಿವಾಸಿಗಳು 4.4 ವರ್ಷ ಹೆಚ್ಚಾಗಬಹುದು ಎಂದು ಎಕ್ಯೂಎಲ್‌ಐ ವರದಿ ಹೇಳುತ್ತದೆ.

★ ಪ್ರತಿಯೊಬ್ಬ ಭಾರತೀಯನು ಡಬ್ಲ್ಯೂಹೆಚ್‌ಓ ಮಾನದಂಡಗಳಿಗಿಂತ ಮಾಲಿನ್ಯದ ಮಟ್ಟ ಹೆಚ್ಚಿರುವ ಪ್ರದೇಶಗಳಲ್ಲಿ ವಾಸಿಸುತ್ತಾನೆ.

★ 67.4% ಜನರು ಭಾರತದ ಸ್ವಂತ ವಾಯು ಗುಣಮಟ್ಟದ ಮಾನದಂಡವನ್ನು ಮೀರಿದ ಸ್ಥಳಗಳಲ್ಲಿ ವಾಸಿಸುತ್ತಿದ್ದಾರೆ.

★ 1998 ರಿಂದ 2021 ರವರೆಗೆ, ಮಾಲಿನ್ಯವು 67.7% ರಷ್ಟು ಏರಿಕೆಯಾಗಿದ್ದು, ಜೀವಿತಾವಧಿಯಲ್ಲಿ 2.3 ವರ್ಷಗಳನ್ನು ಕಡಿತಗೊಳಿಸಿದೆ.

★ 2013 ಮತ್ತು 2021 ರ ನಡುವೆ, ವಿಶ್ವದ ಮಾಲಿನ್ಯ ಹೆಚ್ಚಳದ 59.1% ಭಾರತದಿಂದ ಬಂದಿದೆ.

★ ಗಾಳಿಯು ಡಬ್ಲ್ಯೂಹೆಚ್‌ಓ ಮಾರ್ಗಸೂಚಿಗಳನ್ನು ಪೂರೈಸಿದರೆ, ದೆಹಲಿ ನಿವಾಸಿಗಳು 11.9 ವರ್ಷ ಜೀವಿತಾವಧಿಯನ್ನು ಪಡೆಯಬಹುದು ಮತ್ತು ಉತ್ತರ 24 ಪರಗಣಗಳ ಜನರು 5.6 ವರ್ಷ ಜೀವಿತಾವಧಿಯನ್ನು ಪಡೆಯಬಹುದು.

ವಾಯುಮಾಲಿನ್ಯವು ಹೃದಯ ಕಾಯಿಲೆ ಅಥವಾ ಕಳಪೆ ಪೋಷಣೆಗಿಂತ ಹೆಚ್ಚಿನ ವರ್ಷಗಳ ಜೀವಿತಾವಧಿಯನ್ನು ತೆಗೆದುಕೊಳ್ಳುತ್ತದೆ ಎಂದು ಅಧ್ಯಯನವು ತೋರಿಸುತ್ತದೆ. ಸರಾಸರಿ, ಹೃದಯ ಸಂಬಂಧಿ ಕಾಯಿಲೆಗಳು ಜೀವಿತಾವಧಿಯಲ್ಲಿ 4.5 ವರ್ಷಗಳನ್ನು ಕಡಿತಗೊಳಿಸಿದರೆ, ಅಪೌಷ್ಟಿಕತೆಯು ಜೀವಿತಾವಧಿಯಲ್ಲಿ 1.8 ವರ್ಷಗಳನ್ನು ಕಡಿಮೆ ಮಾಡುತ್ತದೆ.

ಇದು ವಾಯು ಮಾಲಿನ್ಯವನ್ನು ಭಾರತದಲ್ಲಿ ಪ್ರಮುಖ ಆರೋಗ್ಯ ಅಪಾಯವನ್ನಾಗಿ ಮಾಡಿದೆ ಎಂದು ವರದಿ ಒತ್ತಿ ಹೇಳುತ್ತದೆ, ಬಲವಾದ ಮತ್ತು ನಿರಂತರ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತದೆ.

ನಿಮಗೆ ಇದರ ಬಗ್ಗೆಯೂ ಆಸಕ್ತಿ ಇರಬಹುದು - ಸೌದಿ ಅರೇಬಿಯಾ ಪರಿಸರ ಕಾಳಜಿಯನ್ನು ಎದುರಿಸುತ್ತಿರುವ ಶೂನ್ಯ ಮಾಲಿನ್ಯ ನಗರವನ್ನು ನಿರ್ಮಿಸಲಿದೆ.

# ಭತ್ತದ ರಾಶಿಯ ರೈತ, ಚಿನ್ನದ ಅಂಬಾರಿಯ ರಾಜ!

ದಸರಾ ಉದ್ಘಾಟನೆಯ ರಾಜಕೀಯ. ದಸರಾ ಉದ್ಘಾಟನೆ ಮಾಡುವವರ ಬಗ್ಗೆ ವಾದ ವಿವಾದಗಳು ಸಾಕಷ್ಟು ಕಾವೇರಿ ಇರುವಾಗ, ಕಾವೇರಿಯ ತಟದ ಕಾಯಕ ಜೀವಿ, ಉಳುವ ಯೋಗಿ ಮಣ್ಣಿನ ಮಗನೊಬ್ಬನ ಸ್ವಗತ

ನಾನು ರಾಜನಲ್ಲ, ನಾನೊಬ್ಬ ಸಾಮಾನ್ಯ ಕೃಷಿಕ, ನನಗೆ ಅರಮನೆ ಇಲ್ಲ, ನನಗಿರುವುದು ಹಂಚಿನ ಮನೆ, ನಾನು ಆನೆಯ ಮೇಲೆ ಕುಳಿತು ಓಡಾಡುವವನಲ್ಲ, ಎತ್ತಿನ ಗಾಡಿಯಲ್ಲಿ ಕಬ್ಬು ಸಾಗಿಸುವವನು ನಾನು, ಸಿಂಹಾಸನ ಮೇಲೆ ಕುಳಿತು ಕೊಳ್ಳುವವ ನಾನಲ್ಲ, ಹುಲ್ಲು ಹಾಸಿನ ಮೇಲೆ ಮಲಗುವವ ನಾನು, ಛತ್ರ ಚಾಮರ ಬೀಸಣಿಕೆಯ ತಂಪು ಗಾಳಿ ನನಗಿಲ್ಲ, ಬಿಸಿಲಿನ ಝಳದಲ್ಲಿ, ಗಾಳಿಯ ರಭಸಕ್ಕೆ ಭತ್ತದ ರಾಶಿಯ ಹೊಟ್ಟು ತೂರುವವನು ನಾನು, ಭಕ್ಷ್ಯ ಭೋಜನ ತಿನ್ನುವವನಲ್ಲ, ರಾಗಿ, ರೊಟ್ಟಿ, ಜೋಳ, ಮೆಣಸಿನಕಾಯಿ, ಸೊಪ್ಪು, ಗೊಜ್ಜು ತಿನ್ನುವವನು ನಾನು, ಆಳು ಕಾಳು, ಸೇವಕ, ಸೈನಿಕರು ನನಗಿಲ್ಲ, ನನಗೆ ನಾನೇ ಕಾಲಾಳು, ಮೈತುಂಬ ವೈಭವೋಪೇತ ಬಟ್ಟೆ ತೊಡಲು ನಾನು ಅರಸನಲ್ಲ,

ಪಂಚೆ, ಜುಬ್ಬ ಕೆಲವೊಮ್ಮೆ ಬರಿಮೈ ಫಕೀರ ನಾನು, ಸುಗಂಧ ದ್ರವ್ಯಗಳ ವಾಸನೆ ನನಗಿಲ್ಲ, ನನಗಿರುವುದು ನನ್ನದೇ ಬೆವರಿನ ಘಮಲು, ಈ ಮಣ್ಣಿನ ಸುವಾಸನೆ, ತಲೆಯ ಮೇಲೆ ವಜ್ರಖಚಿತ ಕಿರೀಟ ನನಗಿಲ್ಲ, ಟವಲು ಸುತ್ತಿ, ರುಮಾಲು ಕಟ್ಟಿ ಎಲ್ಲಾ ಕಾಲಕ್ಕೂ ಸಲ್ಲುವ ಕಿರೀಟ ಈ ನನ್ನ ವಸ್ತ್ರ, ಟಿವಿ ಪತ್ರಿಕೆಗಳಲ್ಲಿ ಮಹಾರಾಜರು, ಸ್ವಾಮಿಗಳು, ಬುದ್ದಿಗಳು, ಧಣಿಗಳು ಎನ್ನುವ ಹೆಸರಿಲ್ಲ ನನಗೆ, ಹೆಂಡತಿ ಕರೆಯುವ ಏನ್ರೀ, ಮಗಳು ಕರೆಯುವ ಅಪ್ಪ, ಗೆಳೆಯರು ಕರೆಯುವ ಲೇ ಎನ್ನುವುದೇ ನನ್ನ ಗುರುತು, ಸರ್ವ ಋತುವಿನ ಹವಾ ನಿಯಂತ್ರಣ ವಾತಾವರಣ ನನಗಿಲ್ಲ, ಬೇಸಿಗೆ, ಚಳಿ, ಮಳೆ, ಗಾಳಿಗಳೇ ನನಗೆ ಅಪ್ಯಾಯಮಾನ, ಯಾವುದೇ ಉತ್ಸವ, ಸಂಭ್ರಮ, ಹಬ್ಬ, ಮಹೋತ್ಸವಗಳ, ಜನಜಂಗುಳಿಯ ನೂಕಾಟ, ಕರ್ಕಶ ಧ್ವನಿಗಳು ಕೇಳಿಸುವುದಿಲ್ಲ ನನಗೆ, ಈ ಬೆಳದಿಂಗಳಲ್ಲಿ ತೋಟದ ಮನೆಯ ರಾತ್ರಿಯ ನೀರವ ಮೌನದ ಏಕಾಂತವೇ ನನ್ನ ಧ್ಯಾನ, ದಸರಾ ಅಂಬಾರಿಯ ಮೇಲೆ ಸವಾರಿ ಮಾಡುವವರು ನೀವು, ಪ್ರಕೃತಿಯೇ ಸವಾರಿ ಮಾಡಲು ಹೆಗಲು ನೀಡುವವರು ನಾವು, ವೇದಘೋಷಗಳ ಮಧ್ಯೆ, ಹೋಮ ಹವನಗಳ ನಡುವೆ, ಧೂಪದ ಹೊಗೆಯ ಮಬ್ಬಿನಲಿ ಪೂಜೆ ಮಾಡುವವರು ನೀವು, ಪ್ರಕೃತಿಯ ಎಲ್ಲಾ ಶಬ್ದ ತರಂಗಗಳಿಗೆ ಕಿವಿಯಾಗುವವರು ನಾವು, ನಿಮ್ಮ ಬಗ್ಗೆ ಮಾತನಾಡುವವರು ಕೋಟ್ಯಂತರ ಮಂದಿ ಸದಾ ನಿಮ್ಮ ಸುತ್ತಲೂ, ನಮ್ಮ ಬಗ್ಗೆ ನಮ್ಮದೇ ಮಾತು ನಮ್ಮ ಆತ್ಮಸಾಕ್ಷಿ, ನಾನು ಏಕಾಂಗಿ, ಚೆನ್ನಾಗಿ ತಿಂದುಂಡವರ ಆದ್ಯತೆಗಳೇ ಬೇರೆ, ಶ್ರಮಜೀವಿಗಳ ಅವಶ್ಯಕತೆಗಳೇ ಬೇರೆ, ಸರ್ಕಾರಕ್ಕೊಂದು ಚೇಷ್ಟೆ, ಅರಮನೆಗೊಂದು ಕುಚೇಷ್ಟೆ, ಸಾಮಾನ್ಯರಿಗೆ ಬದುಕೇ ಒಂದು ನಿಷ್ಠೆ, ಒಂದು ಕ್ಷಣದ ಉದ್ಘಾಟನೆಗೆ ಇಷ್ಟೆಲ್ಲಾ ರಂಪಾಟಗಳ ಗೊಡವೆ ನಮಗೇಕೆ, ನಮಗೆ ನಾವೇ ಚಕ್ರವರ್ತಿ, ಬೇಡ ನಮಗೆ ಹೆಸರಿನ ಕೀರ್ತಿಶನಿ.

**- ವಿವೇಕಾನಂದ. ಎಚ್. ಕೆ.,** ಬೆಂಗಳೂರು



# ಎಲೆಗಳಿಂದ ಕಲಾಕೃತಿಗಳು



ಹಬ್ಬಗಳನ್ನು ಆಚರಿಸುವಾಗ ಮತ್ತು ಸಮಾರಂಭಗಳಲ್ಲಿ ಎಲೆಗಳಿಂದ ತೋರಣ ಕಟ್ಟುವುದು ಹಾಗೂ ಕಂಬಗಳಿಗೆ ಎಲೆಗಳನ್ನು ಸುತ್ತಿ ಅಲಂಕರಿಸುವುದನ್ನು ನಾವು ಕಂಡಿದ್ದೇವೆ. ಪ್ರಕೃತಿಯ ಅದ್ಭುತ ಕೊಡುಗೆಗಳಾದ ಎಲೆಗಳು ತಮ್ಮ ಪತ್ರಹರಿತ್ತಿನ ಮೂಲಕ ದ್ಯುತಿ ಸಂಶ್ಲೇಷಣೆ ನಡೆಸಿ, ಸಸ್ಯಗಳ ಆಹಾರ ಉತ್ಪಾದನೆಗೆ ಮೂಲವಾಗಿವೆ. ಆ ಮೂಲಕ ಭೂಮಿಯ ಎಲ್ಲ ಜೀವರಾಶಿಗಳ ಉಳಿವಿಗೆ ಕಾರಣವಾಗಿವೆ.

ವಿವಿಧ ಆಕಾರ, ಅಳತೆ ಮತ್ತು ಬಣ್ಣಗಳಲ್ಲಿ ಕಂಡು ಬರುವ ಎಲೆಗಳಿಂದ ಅತ್ಯಾಕರ್ಷಕ ಕಲಾಕೃತಿಗಳನ್ನು ರಚಿಸಬಹುದು:

ಎಲೆಗಳಿಂದ ಆಕೃತಿಗಳು
ಎಲೆಗಳಿಂದ ಕೊಲಾಜ್
ಎಲೆಗಳಿಂದ ಅಚ್ಚು
ಎಲೆಗಳಿಂದ ಫಲಕ (ಪಿನ್ ಚುಚ್ಚಿ ಗೋಡೆಯಲ್ಲಿ ನೇತಾಡಿಸಲು)
ಎಲೆಗಳಲ್ಲಿ ಪೈಂಟಿಂಗ್
ಎಲೆಗಳನ್ನು ಹಗ್ಗದಿಂದ ಕಟ್ಟಿ ನೇತಾಡಿಸುವುದು (ತೋರಣ ಕಟ್ಟುವುದು)

ಎಲ್ಲೆಲ್ಲೂ ಗಿಡಮರಬಳ್ಳಿಗಳಿರುವ ಕಾರಣ, ನಮ್ಮ ಮನೆಯ ಹತ್ತಿರ ಒಂದು ಸುತ್ತು ನಡೆದರೆ ಸಾಕಷ್ಟು ಎಲೆಗಳನ್ನು ಸಂಗ್ರಹಿಸಬಹುದು. ಅವನ್ನು ಒಣಗಿಸಿ, ಅವುಗಳಿಂದ ಇಂತಹ ಕಲಾಕೃತಿಗಳನ್ನು ರಚಿಸಬಹುದು. ಇದೊಂದು ಪ್ರಕೃತಿಗೆ ನಮ್ಮನ್ನು ಜೋಡಿಸುವ ಚಟುವಟಿಕೆ ಮತ್ತು ನಮ್ಮ ಸೃಜನಶೀಲತೆಗೊಂದು ಸವಾಲು, ಅಲ್ಲವೇ?

# ಅರ್ಹರಿಗೆ ಸರ್ಕಾರಿ ಸೌಲಭ್ಯ ಒದಗಿಸಲು ಕ್ರಮ ವಹಿಸಿ

## ಅಲ್ಪ ಸಂಖ್ಯಾತರ ಕುಂದು ಕೊರತೆ ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಲತಾಕುಮಾರಿ ಸೂಚನೆ

• ಪ್ರಜೋದಯ ವರದಿ

**ಹಾಸನ:** ಅರ್ಹರಿಗೆ ಸರ್ಕಾರಿ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಮೂಲಭೂತ ಸೌಕರ್ಯ ಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಲತಾಕುಮಾರಿ ಅವರು ಸೂಚಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಸೋಮವಾರ ಅಲ್ಪ ಸಂಖ್ಯಾತರ ಕುಂದು ಕೊರತೆ ಸಭೆ ನಡೆಸಿ ಮಾತನಾಡಿದ ಅವರು, ಅಮಲು ಮುಕ್ತ ಸಮಾಜ ನಿರ್ಮಾಣಕ್ಕಾಗಿ ಸಮುದಾಯದಲ್ಲಿ ವಿಶೇಷ ಕಾರ್ಯಗಾರ ಆಯೋಜಿಸುವುದು ಅತ್ಯಗತ್ಯವಾಗಿದೆ. ಶೀಘ್ರದಲ್ಲಿಯೇ ಈ ಕಾರ್ಯಗಾರ ಆಯೋಜಿಸಲು ಕ್ರಮ ವಹಿಸುತ್ತೇವೆ. ಈ ಕಾರ್ಯಾಗಾರಕ್ಕೆ ಸಮುದಾಯದವರ ಸಹಕಾರವೂ ಕೂಡ ಅತ್ಯಗತ್ಯವಾಗಿದೆ ಎಂದು ಅವರು ತಿಳಿಸಿದರು.

ನಗರ ವೀಕ್ಷಣೆಗೆ ಹೋದಂತಹ ಸಂದರ್ಭದಲ್ಲಿ ಪೆನ್ಷನ್ ಮೊಹಲ್ಲಾದಂತಹ ಸ್ಥಳಗಳಲ್ಲಿ ಈ ರೀತಿಯ ಸಮಸ್ಯೆಗಳು ಹೆಚ್ಚಾಗಿ ಕಂಡುಬರುತ್ತಿವೆ ಎಂದು ಸಾರ್ವಜನಿಕರು ತಮ್ಮ ಗಮನಕ್ಕೆ ತಂದಿದ್ದಾರೆ. ಇದು ಬಹಳ ಗಂಭೀರವಾದಂತಹ ಸಮಸ್ಯೆ, ಮಾದಕ ವ್ಯಸನಗಳಿಗೆ ಒಳಗಾಗಿರುವವರರನ್ನು ಯಾವ ರೀತಿಯಾಗಿ ಮನಃ ಪರಿವರ್ತನೆ ಮಾಡಬೇಕು ಎಂಬುದಾಗಿ ಚರ್ಚಿಸಿ ಒಂದು ಕ್ರಿಯಾ ಯೋಜನೆ ಸಿದ್ಧಪಡಿಸುತ್ತಿದ್ದೇವೆ ಎಂದರು.



ಚನ್ನರಾಯಪಟ್ಟಣದ ದೊಡ್ಡ ಮೊಹಲ್ಲ ರಸ್ತೆಯಲ್ಲಿರುವ ಜಾಮಿಯಾ ಮಸೀದಿ ಕಮಿಟಿಗೆ ಖಬರಸ್ತಾನ್ ಜಾಗ ಮಂಜೂರು ಮಾಡಿಕೊಡಲು ಸಂಬಂಧಪಟ್ಟ ತಹಶೀಲ್ದಾರ್ ಅವರಿಗೆ ಕ್ರಮವಹಿಸಲು ಸೂಚಿಸಿದರಲ್ಲದೆ, ಹೊಳೆನರಸೀಪುರ ತಾಲೂಕಿನ ಕಡವಿನ ಕೋಟೆ ಗ್ರಾಮದ ಖಬರಸ್ತಾನ್‌ದಲ್ಲಿ ಶವಸಂಸ್ಕಾರ ಮಾಡಲು ರಕ್ಷಣೆ ಒದಗಿಸುವ ಕುರಿತು ಪೊಲೀಸ್ ಇಲಾಖೆ ಕ್ರವ ುವಹಿಸಲು ತಿಳಿಸಿದರು.

ಅರಕಲಗೂಡು ಕೋಟೆ ಮುಸ್ಲಿಂ ಸಮುದಾಯದ ಖಬರಸ್ತಾನ್‌ಗೆ ಕಾಂಪೌಂಡನ್ನು ನಿರ್ಮಿಸಿಕೊಡಲು ಕ್ರಮ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗೆ ಸೂಚಿಸಿದರು. ಬೇಲೂರು ತಾಲ್ಲೂಕಿನ ಅರೇಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.239,241,242ರ ಜಮೀನನ್ನು ಮುಸ್ಲಿಂ ಸಮುದಾಯದವರು ಉಪಯೋಗಿಸಲು ಸೂಕ್ತವಾದ ಪೊಲೀಸ್ ಬಿಗಿಭದ್ರತೆಯೊಂದಿಗೆ ನೀಡಬೇಕಾಗಿ ತಿಳಿಸಿದರು.

ಬೌದ್ಧ ಧರ್ಮಚಾರಿಗಳಿಗೆ ಮಾಸಾಶನ ನೀಡುವ ಕುರಿತಾಗಿ ಸರ್ಕಾರದ ಮಟ್ಟದಲ್ಲಿ ಸ್ಪಷ್ಟನೆ ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಗಳು ಮಾಸಾಶನ ನೀಡಲು ಕ್ರಮ ವಹಿಸುವಂತೆ ಸೂಚಿಸಿದರಲ್ಲದೆ, ಬ್ಯಾರಿ ಸಮುದಾಯಕ್ಕೆ ಭಾಷಾ ಅಲ್ಪಸಂಖ್ಯಾತರ ದೃಢೀಕರಣ ಪತ್ರ ನೀಡುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂದು ತಿಳಿಸಿದರು.

ಗುಳಗಳಲೆ ಗ್ರಾಮದ ಜುಮಾ ಮಸೀದಿಗೆ ಸಂಬಂಧಿಸಿದ ದಾಖಲೆಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಕ್ರಮ ಕೈಗೊಳ್ಳಲು ನಿರ್ದೇಶಿಸಿದರಲ್ಲದೆ, ನೂರಕ್ಕಿ ಗ್ರಾಮದ ಜಾಮಿಯಾ ಮಸೀದಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ, ಶೌಚಾಲಯದ ಮೇಲ್ಚಾವಣಿಯ ಅವಶ್ಯಕತೆಯಿದೆ. ಈ ಸಮಸ್ಯೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ವಿಶ್ವನಾಥನಗರದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಕಂಡು ಬಂದಿದೆ. ಅಲ್ಲಿಗೆ ಸೂಕ್ತವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕು.

ಐ.ಪಿ.ಜಿ.ಆರ್.ಎಸ್. ತಂತ್ರಾಂಶದಲ್ಲಿ ಸಾರ್ವಜನಿಕರು ದೂರುಗಳನ್ನು ಸಲ್ಲಿಸಲಾಗಿದೆ. ಆದರೆ, ಆ ಸಮಸ್ಯೆ ಬಗೆಹರಿಯುವುದಕ್ಕಿಂತ ಮುಂಚೆಯೇ ಸಂಬಂಧಪಟ್ಟ ಅರ್ಜಿಯನ್ನು ಮುಕ್ತಾಯ ಗೊಳಿಸಿರುವುದು ಕಂಡು ಬಂದಿದೆ. ಈ ರೀತಿ ಆಗದಂತೆ ಸಮಸ್ಯೆಗಳನ್ನು ಬಗೆಹರಿಸಿ. ಪೆನ್ಷನ್ ಮೊಹಲ್ಲಾದಲ್ಲಿ ಯಾವುದೇ ರೀತಿಯ ಎ.ಟಿ.ಎಂ, ಬ್ಯಾಂಕ್ ಸೌಲಭ್ಯವಿಲ್ಲ. ಹಾಗಾಗಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಯಾವುದಾದರೂಂದು ಬ್ಯಾಂಕಿನ ಶಾಖೆಯನ್ನು ತೆರೆಯಬೇಕು. ಜೊತೆಗೆ ಎ.ಟಿ.ಎಂ ಕೂಡ ತೆರೆಯಲು ಕ್ರಮ ವಹಿಸಬೇಕು.

ಶ್ರವಣಬೆಳಗೊಳದಲ್ಲಿ ಕೆರೆಗಳ ಅಭಿವೃದ್ಧಿಪಡಿಸುವುದು ಜೊತೆಗೆ ಒಳ ಚರಂಡಿ ದುರಸ್ತಿ ಮಾಡಿಸುವುದು ವಿಂಧ್ಯಗಿರಿ ತಪ್ಪಲಿನಲ್ಲಿ ಮತ್ತು ಶ್ರೀಮಠದ ಹತ್ತಿರ ಸ್ನಾನ ಗೃಹ ಮತ್ತು ಶೌಚಾಲಯ ನಿರ್ಮಾಣದ ಕುರಿತು ಪ್ರವಾಸೋದ್ಯಮ ಇಲಾಖೆ ಗಮನ ಹರಿಸಿ ಸಮಸ್ಯೆಗಳನ್ನು ಬಗೆಹರಿಸಲು ತಿಳಿಸಿದರು.

ಶ್ರವಣಬೆಳಗೊಳ ಪ್ರವೇಶಿಸುವ ಪ್ರಮುಖ ರಸ್ತೆಗಳಲ್ಲಿರುವ ಮಾಂಸ ಮಾರಾಟದ ಅಂಗಡಿಗಳನ್ನು ತೆರವು ಮಾಡುವ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಅನುಪಾಲನಾ ವರದಿಯನ್ನು ನೀಡಲು ಸೂಚಿಸಿದರು.

ಆಲೂರಿನ ಸರ್ಕಾರಿ ಉರ್ದು ಶಾಲೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಜೊತೆಗೆ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕು. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ವರದಿ ಸಲ್ಲಿಸಲು ತಿಳಿಸಿದರು.

ಮೂಲಭೂತ ಸೌಕರ್ಯ, ಖಬರಸ್ತಾನದ ಜಮೀನಿಗೆ ಕಾಂಪೌಂಡ್ ನಿರ್ಮಾಣ, ಬೇಲೂರು ತಾಲ್ಲೂಕಿನ ಬಕ್ಕರವಳ್ಳಿ ಗ್ರಾಮಕ್ಕೆ ಸಾರಿಗೆ ವ್ಯವಸ್ಥೆ, ರಸ್ತೆ ಕಾಮಗಾರಿ, ಮೌಲಾನ ಆಜಾದ್ ಶಾಲೆಗೆ ಹೊಸ ಕಟ್ಟಡ ನಿರ್ಮಾಣ ಕುರಿತು, ಬಂಟೇನಹಳ್ಳಿಗೆ ಅಲ್ಪ ಸಂಖ್ಯಾತರ ಮೆಟ್ರಿಕ್ ಪೂರ್ವ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯ ಮಂಜುರಾತಿಗೆ ಮನವಿ, ಬುದ್ಧ ವಿಹಾರಕ್ಕೆ ಜಮೀನು ಮಂಜೂರು, ಬೌದ್ಧ ಧರ್ಮದ ದಮ್ಮಾಚಾರಿಗಳಿಗೆ ಗೌರವ ಧನ ನೀಡುವ ಕುರಿತು ಹಾಗೂ ಮತ್ತಿತರ ವಿಷಯಗಳ ಕುರಿತು ಸ್ವೀಕೃತಗೊಂಡಿದ್ದ ಅಹವಾಲುಗಳನ್ನು ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

## 12 ಅಡಿ ಉದ್ದದ ಕಾಳಿಂಗ ಸರ್ಪ ಸೆರೆ

• ಪ್ರಜೋದಯ ಎಂದ

**ಹೆತ್ತೂರು:** ಹೋಬಳಿಯ ವಳಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮರ್ಕಹಳ್ಳಿ ಗ್ರಾಮದಲ್ಲಿ ಕಳೆದ ಶುಕ್ರ ವಾರದಿಂದ 12 ಅಡಿ ಉದ್ದವಾದ ಕಾಳಿಂಗ ಸರ್ಪ ಕಾಣಿಸಿಕೊಂಡು ಗ್ರಾಮಸ್ಥರಲ್ಲಿ, ಕಾಫಿ ತೋಟಕ್ಕೆ ಹೋಗುವ ಕೂಲಿ ಕಾರ್ಮಿಕರಲ್ಲಿ ಭಯ ಮತ್ತು ಆತಂಕ ಉಂಟುಮಾಡಿತ್ತು.



ಸೋಮವಾರ ಉರಗ ತಜ್ಞ ಚಂಗಡಿ ಹಳ್ಳಿ ರವಿ ಅವರ ಸಹಾಯದಿಂದ ಕಾಳಿಂಗ ಸರ್ಪವನ್ನು ಹಿಡಿದು ಸುರಕ್ಷಿತವಾಗಿ ಬಿಸ್ಲೆ ರಕ್ಷಿತ ಅರಣ್ಯಕ್ಕೆ ಬಿಡಲಾಯಿತು.


ಮರ್ಕಹಳ್ಳಿ ಗ್ರಾಮದ ಶಂಕರೇಗೌಡ ಅವರು ಕಾಫಿ ತೋಟದಲ್ಲಿ ಕೆಲಸ ಮಾಡುವಾಗ ಕಾಣಿಸಿಕೊಂಡ ಈ ಕಾಳಿಂಗ ಸರ್ಪವನ್ನು ನೋಡಿ ಗ್ರಾಮ ಸ್ಥರು ಗಾಬರಿಗೊಂಡು ತಕ್ಷಣ ಅರಣ್ಯ ಇಲಾಖೆಗೆ ವಿಷಯ ತಿಳಿಸಿದ್ದಾರೆ.

ಯಸಳೂರು ವಲಯ ಅರಣ್ಯ ಅಧಿಕಾರಿಗಳು ಚಂಗಡಿಹಳ್ಳಿಗ್ರಾಮದ ಉರಗ ಪ್ರೇಮಿ ರವಿ ಎಂಬುವವರನ್ನು ಸಂಪರ್ಕಿಸಿ ಅರಣ್ಯ ಇಲಾಖೆಯವರ ಸಹಯೋಗ ದಲ್ಲಿ ಸತತ ಎರಡು ಗಂಟೆಗಳ ಪ್ರಯತ್ನದಿಂದ ಸೆರೆ ಹಿಡಿಯಲಾಯಿತು.

ಪದೆ ಪದೇ ಮಲೆನಾಡು ವ್ಯಾಪ್ತಿಯಲ್ಲಿ ಕಾಣಿಸಿಕೊಳ್ಳುತ್ತಿರುವ ಬೃಹತ್ ಗಾತ್ರದ ಕಾಳಿಂಗ ಸರ್ಪಗಳು ಗ್ರಾಮಸ್ಥರಲ್ಲಿ, ಕಾಫಿ ತೋಟಕ್ಕೆ ಬರುವ ಕೂಲಿ ಕಾರ್ಮಿಕರಲ್ಲಿ ಭಯ ಉಂಟು ಮಾಡಿ, ಕಾಫಿ ತೋಟದ ಕೆಲಸಕ್ಕೆ ಹೋಗಲು ಸಮಸ್ಯೆಯಾಗುತ್ತಿದೆ. ಕೂಡಲೇ ಈ ಹಾವುಗಳು ಎಲ್ಲಿಂದ ಬರುತ್ತವೆ? ಯಾರು ತಂದು ಬಿಡುತ್ತಿದ್ದಾರೆ ಎಂಬುದರ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಅಗ್ರಹಿಸಿದ್ದಾರೆ.

ಬೆಳ್ಳಿಗೌಡ, ಅರಣ್ಯ ವೀಕ್ಷಕರಾದ ಕುಶಾಲ್, ರತನ್ ಇತರರು ಇದ್ದರು.

## ಆಗಸ್ಟ್‌ನಲ್ಲಿ 1.86 ಲಕ್ಷ ಕೋಟಿ ರೂ. ಜಿಎಸ್ಟಿ ಸಂಗ್ರಹ




• ಪ್ರಜೋದಯ ವರದಿ

**ಹೊಸದಿಲ್ಲಿ:** ಆಗಸ್ಟ್ ತಿಂಗಳ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹದ ವಿವರಗಳನ್ನು ಕೇಂದ್ರ ಸರ್ಕಾರ ಸೋಮವಾರ ಬಿಡುಗಡೆ ಮಾಡಿದೆ. ತಿಂಗಳಲ್ಲಿ ಒಟ್ಟು 1.86 ಲಕ್ಷ ಕೋಟಿ ರೂ. ಪರೋಕ್ಷ ತೆರಿಗೆ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಆದಾಯ ಸಂಗ್ರಹದಲ್ಲಿ ಶೇ.6.5ರಷ್ಟು ಬೆಳವಣಿಗೆ ದಾಖಲಾಗಿದೆ. ಆದರೆ ಹಿಂದಿನ ತಿಂಗಳುಗಳಿಗೆ ಹೋಲಿಸಿದರೆ ಬೆಳವಣಿಗೆಯ ವೇಗದಲ್ಲಿ ಇಳಿಕೆ ಕಂಡುಬಂದಿದೆ.

ಇದಕ್ಕೂ ಹಿಂದಿನ ತಿಂಗಳು ಅಂದರೆ ಜುಲೈ 2025ರಲ್ಲಿ 1.96 ಲಕ್ಷ ಕೋಟಿ ರೂ.ನಷ್ಟು ಜಿಎಸ್‌ಟಿ ಸಂಗ್ರಹವಾಗಿತ್ತು. ಇದಕ್ಕೆ ಹೋಲಿಸಿದರೆ ಆಗಸ್ಟ್ ತಿಂಗಳ ಸಂಗ್ರಹದಲ್ಲಿ ಇಳಿಕೆಯಾಗಿದೆ. ಸತತ 8ನೇ ತಿಂಗಳಿನಲ್ಲಿಯೂ ಜಿಎಸ್‌ಟಿ ಸಂಗ್ರಹವು 1.8 ಲಕ್ಷ ಕೋಟಿ ರೂ. ಗಿಂತಲೂ ಹೆಚ್ಚಿದೆ. ಇದು ದೇಶದ ಆರ್ಥಿಕ ಸ್ಥಿರತೆಯನ್ನು ಸೂಚಿಸುತ್ತಿದೆ.

## ಭೂಕಂಪ: 800 ಕ್ಕೂ ಹೆಚ್ಚು ಸಾವು



• ಪ್ರಜೋದಯ ವರದಿ

**ಅಫ್ಘಾನಿಸ್ತಾನ:** ಇಲ್ಲಿನ ಪೂರ್ವ ಭಾಗದಲ್ಲಿ ಭಾನುವಾರ ರಾತ್ರಿ ಸಂಭವಿಸಿದ 6.0 ತೀವ್ರತೆಯ ಪ್ರಬಲ ಭೂಕಂಪದಲ್ಲಿ 800ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ ಎಂದು ಸರ್ಕಾರ ತಿಳಿಸಿರುವುದಾಗಿ ವರದಿಯಾಗಿದೆ.

ಪಾಕಿಸ್ತಾನ ಗಡಿ ಭಾಗದಲ್ಲಿರುವ ಕುನಾರ್ ಪ್ರಾಂತ್ಯದಲ್ಲಿ ಭೂಕಂಪವಾಗಿದೆ. ಕೇವಲ 8 ಕಿ.ಮೀ ಆಳದಲ್ಲಿ ಕಂಪನವಾಗಿದೆ. ಇದರಿಂದಾಗಿ ಅಪಾರ ಹಾನಿ ಸಂಭವಿಸಿದೆ ಎಂದು ಮಾಹಿತಿ ನೀಡಿದ್ದಾರೆ.

ನೂರ್ ಗುಲ್, ಸೋಕಿ, ವತ್ಪುರ್ ಮನೋಗಿ ಜಿಲ್ಲೆಗಳಲ್ಲಿ ಭೂಕಂಪವಾಗಿದೆ. ತಾಲಿಬಾನ್ ಸರ್ಕಾರ ಮತ್ತು ವಿಶ್ವಸಂಸ್ಥೆಯ ನೇತೃತ್ವದಲ್ಲಿ ರಕ್ಷಣಾ ಕಾರ್ಯಾಚರಣೆ ಭರದಿಂದ ಸಾಗುತ್ತಿದೆ. ಕುನಾರ್ ಪ್ರಾಂತ್ಯವೊಂದರಲ್ಲೇ 800 ಜನರು ಮೃತಪಟ್ಟಿದ್ದು, 2,500 ಜನರು ಗಾಯಗೊಂಡಿದ್ದಾರೆ.

ಪಕ್ಕದ ನನ್ಗರ್ಹಾರ್ ಪ್ರಾಂತ್ಯದಲ್ಲಿ ಸುಮಾರು 12 ಜನ ಮೃತಪಟ್ಟಿದ್ದು 255 ಜನ ಗಾಯಗೊಂಡಿದ್ದಾರೆ ಎಂದು ತಾಲಿಬಾನ್ ಸರ್ಕಾರದ ಮುಖ್ಯ ವಕ್ತಾರ ಜಬಿಹುಲ್ಲಾ ಮುಜಾಹಿದ್ ಅವರು ತಿಳಿಸಿದ್ದಾರೆ.

## ಸಾವಿರಾರು ಭಕ್ತರ ಸಮ್ಮುಖದಲ್ಲಿ ಗಣಪತಿ ವಿಸರ್ಜನೆ

• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಕಮಲ್ ದೇವ್ ನರ್ಸಿಂಗ್ ಹೋಂ ಎದುರಿನ ಆವರಣದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದ್ದ ರಾಮೂತ ಹಿಂದೂ ಮಹಾ ಗಣಪತಿಯನ್ನು ಸಾವಿರಾರು ಭಕ್ತಾಧಿಗಳ ಸಮ್ಮುಖದಲ್ಲಿ ವಿಸರ್ಜನೆ ಮಾಡಲಾಯಿತು.



ಪಟ್ಟಣದ ಕಮಲ್ ದೇವ್ ನರ್ಸಿಂಗ್ ಹೋಂನಿಂದ ಹೊರಟ ಗಣಪತಿ ವಿಸರ್ಜನಾ ಮೆರವಣಿಗೆ ಮಂಜ್ರಾಬಾದ್ ಕ್ಲಬ್ ಕಡೆಯಿಂದ ಬಿ.ಎಂ. ರಸ್ತೆಗೆ ಬಂದು, ನಂತರ ಹಳೆಯ ಸಂತೇವೇರಿ ಮಾರ್ಗವಾಗಿ ಪುನಃ ಮುಖ್ಯ ರಸ್ತೆಗೆ ಬಂದು, ಬ್ರಾಹ್ಮಣರ ಬೀದಿಯಲ್ಲಿ ಒಂದು ಸುತ್ತು ಹಾಕಿ ಹೇಮಾವತಿ ಸೇತುವೆಯಲ್ಲಿ ಕ್ರೇನ್ ಮೂಲಕ ಗಣಪತಿಯನ್ನು ಹೇಮಾವತಿ ನದಿಗೆ ವಿಸರ್ಜನೆ ಮಾಡಲಾಯಿತು.

ಮೆರವಣಿಗೆಯಲ್ಲಿ ಸಾವಿರಾರು ಭಕ್ತಾಧಿಗಳು ಭಾಗಿಯಾಗಿದ್ದು, ದಕ್ಷಿಣ ಕನ್ನಡದ ವಯೋಲಿನ್ ಹಾಗೂ ಚಂಡೆ, ಡಿಜೆ, ನಾಸಿಕ್ ಬ್ಯಾಂಡ್, ಉಜಿರೆ ನೃತ್ಯ ತಂಡ, ಟ್ಯಾಬ್ಲೋಗಳು ಹಾಗೂ ಇತರೆ ವಾದ್ಯವೃಂದಗಳು ಮೆರವಣಿಗೆಗೆ ಮೆರಗು ತಂದವು. ವಿಶೇಷವಾಗಿ ದಕ್ಷಿಣಕನ್ನಡ ಜಿಲ್ಲೆಯ ಕಲ್ಲಡ್ಕದ ಬೃಹತ್ ಆಂಜನೇಯ ಟ್ಯಾಬ್ಲೋ ಭಕ್ತಾಧಿಗಳ ಗಮನ ಸೆಳೆಯಿತು. ಮಹಿಳೆಯರು ಸಹ ಹೆಚ್ಚಿನ ಸಂಖ್ಯೆಯಲ್ಲಿ ವಿಸರ್ಜನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮಕ್ಕೆ ಮೆರುಗು ತಂದರು.


ಸಾವಿರಾರು ಭಕ್ತಾಧಿಗಳು ಮೆರವಣಿಗೆಯಲ್ಲಿ ಭಾಗಿಯಾಗಿದ್ದು, ಯುವಕರು, ಮಕ್ಕಳು ಹಾಗೂ ಮಹಿಳೆಯರು ಸಹ ಮೆರವಣಿಗೆಯಲ್ಲಿ ಕುಣಿದು ಕುಪ್ಪಳಿಸಿದರು.

ಧರ್ಮಸ್ಥಳ ಚಲೋ ಕಾರ್ಯಕ್ರಮಕ್ಕೆ ಹೊರಟಿದ್ದ ರಾಜ್ಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಶಾಸಕ ಸಿಮೆಂಟ್ ಮಂಜು ಹಾಗೂ ಬಿಜೆಪಿ ಜಿಲ್ಲಾ ಅಧ್ಯಕ್ಷ ಸಿದ್ದೇಶ್ ನಾಗೇಂದ್ರರವರು ಗಣಪತಿ ವಿಸರ್ಜನಾ ಕಾರ್ಯಕ್ರಮದಲ್ಲಿ ಕೆಲಕಾಲ ಭಾಗವಹಿಸಿದ್ದರು. ಶಾಸಕ ಸಿಮೆಂಟ್ ಮಂಜು ಮೆರವಣಿಗೆಯಲ್ಲಿ ಕುಣಿದು ಕುಪ್ಪಳಿಸಿದರು. ಈ ಸಂದರ್ಭದಲ್ಲಿ ಹಿಂದೂ ಮುಖಂಡ ರಘು ಅವರನ್ನು ಕಾರ್ಯಕರ್ತರು ಸನ್ಮಾನಿಸಿದರು.

ವಿಸರ್ಜನಾ ಕಾರ್ಯಕ್ರಮದಲ್ಲಿ ರಾಮೂತ ಗಣಪತಿ ಸಮಿತಿಯ ಮುಖಂಡರಾದ ಕೌಶಿಕ್, ಶ್ರೀಜಿತ್, ಮಂಜು ಕಬ್ಬಿನಗದ್ದೆ, ದುಷ್ಯಂತ್, ರಮೇಶ್, ಜತಿನ್, ಶಿವುಜಿಪ್ಪಿ, ದೀಪು, ದಿಲೀಪ್, ವಿಜಿತ್, ಶೇಖರ್ ಮುಂತಾದವರು ಭಾಗಿಯಾಗಿದ್ದರು.

## ವಿದ್ಯುತ್ ಅಪಾಯ ನಿವಾರಣೆ

**ಸಕಲೇಶಪುರ:** ತಾಲ್ಲೂಕಿನ ಬಾಗೆ ಸರ್ಕಾರಿ ಶಾಲೆ ಪಕ್ಕದಲ್ಲಿದ್ದ ಮರಕ್ಕೆ ವಿದ್ಯುತ್ ತಂತಿ



ತಗುಲಿ ವಿದ್ಯುತ್ ಪ್ರಹರಿಸಿ ಬೆಂಕಿ ಹೊತ್ತಿಕೊಳ್ಳುತ್ತಿದ್ದುದನ್ನು ಸರಿಪಡಿಸಲಾಗಿದೆ.

ಈ ಬಗ್ಗೆ ಪತ್ರಿಕೆಯಲ್ಲಿ ಶಾಲೆ ಬಳಿ ವಿದ್ಯುತ್ ತಂತಿ ತಗುಲಿ ಮರದಲ್ಲಿ ಬೆಂಕಿ ಎಂಬ ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು. ಈ ಬಗ್ಗೆ ಎಚ್ಚೆತ್ತುಕೊಂಡ ಅಧಿಕಾರಿಗಳು ಮರದ ಕೊಂಬೆಗಳನ್ನು ತೆರವುಗೊಳಿಸಿ ಉಂಟಾಗಬಹುದಾದ ಅನಾಹುತವನ್ನು ತಪ್ಪಿಸಿದ್ದಾರೆ.

ಈ ಸಮಸ್ಯೆ ಬಗ್ಗೆ ಮಲೆನಾಡು ರಕ್ಷಣಾ ಸೇನೆಯ ಪದಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಸೆಸ್ಕಾಂ ಹಾಗು ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದರು. ಮನವಿಗೆ ಸ್ಪಂದಿಸಿ ಸಮಸ್ಯೆ ಸರಿಪಡಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳು ಎದುರಿಸುತ್ತಿದ್ದ ಆತಂಕ ದೂರವಾಗಿದೆ.

## ಕರಾಟೆ: ಹಾಸನ ಪಟುಗಳಿಗೆ ಟ್ರೋಫಿ



• ಪ್ರಜೋದಯ ವರದಿ

**ಹಾಸನ:** ತರೀಕೆರೆಯಲ್ಲಿ ಇತ್ತೀಚೆಗೆ ನಡೆದ ದಕ್ಷಿಣ ಏಷ್ಯಾ ಕರಾಟೆ ಪಂದ್ಯಾವಳಿಯಲ್ಲಿ ಹಾಸನದ ಕರಾಟೆ ಪಟುಗಳು ಕಥಾ ಮತ್ತು ಕುಮಟೆ ವಿಭಾಗದಲ್ಲಿ ಆಕರ್ಷಿಕ ಟ್ರೋಫಿ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ತರೀಕೆರೆ ಶಾಸಕ ಶ್ರೀನಿವಾಸ್, ಶಿವಮೊಗ್ಗ ಜಿಲ್ಲಾ ಬಾಕ್ಸಿಂಗ್ ಸಂಸ್ಥೆ ಅಧ್ಯಕ್ಷ ವಿನೋದ್, ಹಾಸನ ಜಿಲ್ಲಾ ಕರಾಟೆ ಸಂಸ್ಥೆ ಅಧ್ಯಕ್ಷ ಮಹಮ್ಮದ್ ಆರಿಫ್, ನರಸಿಂಹ, ಹಾಸನದ ಸುಸೈನ್, ಶಯಾನ್, ಜಮೀರ್ ಅಹಮ್ಮದ್ ಇತರರಿದ್ದರು.



ಹಾಸನ: ಕೃಷಿ ಮಹಾವಿದ್ಯಾಲಯ, ಕಾರೇಕೆರೆ, ಹಾಸನದ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಡಿಯಲ್ಲಿ ಅಂತಿಮ ವರ್ಷದ ಕೃಷಿ ಮತ್ತು ಜೈವಿಕ ತಂತ್ರಜ್ಞಾನ ವಿದ್ಯಾರ್ಥಿಗಳು 'ಕೊಳವೆಬಾವಿ ಮರುಪೂರಣ' ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಂಪನಹಳ್ಳಿಯಲ್ಲಿ ಆಯೋಜಿಸಿದ್ದರು. ಕಾರ್ಯಕ್ರಮದಲ್ಲಿ ಡಾ. ವೇಣು. ಎಸ್.ಎ., ಸಹಾಯಕ ಪ್ರಾಧ್ಯಾಪಕರು, ಕೃಷಿ ತಂತ್ರಜ್ಞಾನ ವಿಭಾಗ ಇವರು ಉಪಸ್ಥಿತರಿದ್ದರು.

## ಮಹಿಳಾ ವಿಶ್ವಕಪ್ : ವಿಜೇತ ತಂಡಕ್ಕೆ 39.55 ಕೋಟಿ ರೂ.

• ಪ್ರಜೋದಯ ವರದಿ

**ದುಬೈ:** ಮುಂಬರುವ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಚಾಂಪಿಯನ್ನರು ಟೂರ್ನಿಯ ಇತಿಹಾಸದಲ್ಲೇ ಅತ್ಯಧಿಕ ಬಹುಮಾನ ಮೊತ್ತ ಗಳಿಸಲಿದ್ದಾರೆ. ವಿಜೇತರಿಗೆ ನೀಡುವ ಬಹುಮಾನದ ಹಣವನ್ನು 11.65 ಕೋಟಿಯಿಂದ 39.55 ಕೋಟಿಗೆ ಏರಿಸಲಾಗಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಸೋಮವಾರ ಪ್ರಕಟಿಸಿದೆ.

2023ರ ಪುರುಷರ ವಿಶ್ವಕಪ್ ಗೆದ್ದ ಆಸ್ಟ್ರೇಲಿಯಾ ತಂಡ 31.35 ಕೋಟಿ ಗಳಿಸಿತ್ತು. ಮಹಿಳಾ ವಿಶ್ವಕಪ್‌ನ 13ನೇ ಆವೃತ್ತಿ ಸೆ.30ರಂದು ಆರಂಭವಾಗಲಿದೆ. ಭಾರತ ಮತ್ತು ಶ್ರೀಲಂಕಾ ಆತಿಥ್ಯ ವಹಿಸಿವೆ. ಎಂಟು ತಂಡಗಳು ಕಣದಲ್ಲಿರುವ ಈ ಟೂರ್ನಿಯ ಬಹುಮಾನ ಮೊತ್ತ ಸುಮಾರು ಮೂರು ಪಟ್ಟು ಹೆಚ್ಚಾಗಿದೆ.

ಈ ಬಾರಿ ಟೂರ್ನಿಯ ಒಟ್ಟು ಬಹುಮಾನ ಮೊತ್ತ 122.5 ಕೋಟಿ (13.88 ದಶಲಕ್ಷ). ಇದು ನ್ಯೂಜಿ ಲೆಂಡ್‌ನಲ್ಲಿ ಕಳೆದ ಬಾರಿಯ (20 22ರ) ಆವೃತ್ತಿಗೆ



ಹೋಲಿಸಿದರೆ ಶೇ.297ರಷ್ಟು ಅಧಿಕ. ಈ ಏರಿಕೆಯು 2023ರ ಪುರುಷರ ಏಕದಿನ ವಿಶ್ವಕಪ್ ಟೂರ್ನಿಯ ಬಹುಮಾನ ಮೊತ್ತ (ಸುಮಾರು 88.26 ಕೋಟಿ) ಮೀರಿಸಿದೆ ಎಂದು ಐಸಿಸಿ ವಿವರಿಸಿದೆ. ರನ್ನರ್ ಅಪ್ ಸ್ಥಾನ ಪಡೆಯುವ ತಂಡ 19.77 ಕೋಟಿ ಮೊತ್ತ (2.24 ದಶಲಕ್ಷ) ಸಂಪಾದಿಸಲಿದೆ. ಇದು ಕಳೆದ ಬಾರಿಯ ಮೊತ್ತವಾದ 5.30 ಕೋಟಿಗೆ ಹೋಲಿಸಿದಲ್ಲಿ ಶೇ.273 ರಷ್ಟು ಹೆಚ್ಚು.

ಸೆಮಿಫೈನಲ್‌ನಲ್ಲಿ ಸೋತ ತಂಡಗಳು 9.89 ಕೋಟಿ ಮೊತ್ತ ತಮ್ಮದಾಗಿಸಿ ಕೊಳ್ಳಲಿವೆ. 2022ರಲ್ಲಿ ಸೆಮಿ ಫೈನಲ್‌ನಲ್ಲಿ ಸೋತ ತಂಡಗಳು ಪಡೆದ ಬಹುಮಾನ ಮೊತ್ತ 2.65 ಕೋಟಿ.

ಗುಂಪು ಹಂತದಲ್ಲಿ ಗೆಲ್ಲುವ ತಂಡಗಳು 30.29 ಲಕ್ಷ ಸಂಪಾದಿಸಲಿವೆ. ಐದು ಮತ್ತು ಆರನೇ ಸ್ಥಾನ ಪಡೆಯುವ ತಂಡಗಳಿಗೆ 62 ಲಕ್ಷ ದೊರೆಯಲಿದೆ. ಏಳು ಮತ್ತು 8ನೇ ಸ್ಥಾನ ಪಡೆಯುವ ತಂಡಗಳು 24.71 ಲಕ್ಷ ಸಂಪಾದಿಸಲಿವೆ. ಭಾಗವಹಿಸುವ ಪ್ರತಿಯೊಂದು ತಂಡಗಳಿಗೆ22ಲಕ್ಷ ಸಿಗಲಿದೆ.

ಮಹಿಳಾ ಕ್ರಿಕೆಟ್‌ಗೆ ಜನಪ್ರಿಯತೆ ಹೆಚ್ಚಿಸುವ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ. 2024ರ ವಿಶ್ವಕಪ್‌ಗೆ ಮೊದಲು ಘೋಷಿಸಿದಂತೆ ಬಹುಮಾನ ಮೊತ್ತದಲ್ಲಿ ಸಮಾನತೆ ತರುವ ಉದ್ದೇಶದಿಂದಲೂ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ಬಾರಿಯ ವಿಶ್ವಕಪ್ ಪಂದ್ಯಗಳು ಐದು ತಾಣಗಳಲ್ಲಿ ಭಾರತದ ಗುವಾ ಹಟಿ, ಇಂದೋರ್, ನವಿ ಮುಂಬೈ, ವಿಶಾಖಪಟ್ಟಣ ಮತ್ತು ಶ್ರೀಲಂಕಾದ ಕೊಲಂಬೊದಲ್ಲಿ ನಡೆಯಲಿವೆ. ಪಾಕಿಸ್ತಾನ ತನ್ನ ಪಂದ್ಯಗಳನ್ನು ಕೊಲಂಬೊದಲ್ಲಿ ಆಡಲಿದೆ.

## ಧರ್ಮಸ್ಥಳ ಪ್ರಕರಣ: ಎನ್.ಐ.ಎ.ಗೆ ವಹಿಸಲು ಆಗ್ರಹ




• ಪ್ರಜೋದಯ ವರದಿ

**ಸಕಲೇಶಪುರ:** ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅಪಪ್ರಚಾರದ ಹಿನ್ನೆಲೆಯಲ್ಲಿ ಶಾಸಕ ಸಿಮೆಂಟ್ ಮಂಜು ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ನೇತೃತ್ವದಲ್ಲಿ ಸಾವಿರಾರು ಕಾರ್ಯಕರ್ತರು ಸಕಲೇಶಪುರ– ಆಲೂರು ಸೇರಿ ಜಿಲ್ಲೆಯ ನಾನಾ ಕಡೆಗಳಿಂದ ವಾಹನ ಮೆರವಣಿಗೆಯಲ್ಲಿ ಧರ್ಮಸ್ಥಳದತ್ತ ಪ್ರಯಾಣ ಬೆಳೆಸಿದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ ರಾಜ್ಯಾದ್ಯಂತ ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಆದರೆ ಹಿಂದೂ ಧರ್ಮದ ವಿರುದ್ಧ ಇಲ್ಲಸಲ್ಲದ ಷಡ್ಯಂತ್ರ ನಡೆಯುತ್ತಿದೆ. ಕಾಂಗ್ರೆಸ್ ಸರ್ಕಾರ ಸದಾ ಹಿಂದೂ ಧರ್ಮ ಹಾಗೂ ಧಾರ್ಮಿಕ ಕೇಂದ್ರಗಳನ್ನು ಗುರಿಯಾಗಿಸಿದೆ. ವಿಷಯವನ್ನು ಎನ್.ಐ.ಎ.ಗೆ ವಹಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಧರ್ಮಸ್ಥಳ ಹಿಂದೂಗಳ ಶ್ರದ್ಧಾ ಕೇಂದ್ರ. ಹಾಸನ ಜಿಲ್ಲೆಯಿಂದ 7 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಧರ್ಮರಕ್ಷಣೆಗೆ ಧರ್ಮಸ್ಥಳಕ್ಕೆ ತೆರಳಿದ್ದಾರೆ. ರಾಜ್ಯ ಸರ್ಕಾರ ರಚಿಸಿದ ಎಸ್.ಐ.ಟಿ. ತನಿಖೆಯಿಂದ ಯಾವುದೇ ಸತ್ಯ ಬಯಲಾಗಿಲ್ಲ. ಇದರಿಂದ ಅನುಮಾನಗಳು ಹೆಚ್ಚಾಗಿದ್ದು, ಎನ್.ಐ.ಎ. ತನಿಖೆ ಅಗತ್ಯವಿದೆ ಎಂದು ಆಗ್ರಹಿಸಿದರು.

ತಾಲ್ಲೂಕು ಅಧ್ಯಕ್ಷ ವಳಲಹಳ್ಳಿ ಅಶ್ವಥ್, ಪ್ರಧಾನ ಕಾರ್ಯದರ್ಶಿ ಅಗ್ನಿ ಸೋಮಶೇಖರ್, ಮಧು ಬೊಮ್ಮನಕೆರೆ, ಬ್ಯಾಕರವಳ್ಳಿ ಜಯಣ್ಣ, ಜಯಪ್ರಕಾಶ್ ದೊಡ್ಡ ದೀಣೆ, ಪುನೀತ್ ಬನ್ನಹಳ್ಳಿ, ಅಲ್ಪ ಸಂಖ್ಯಾತ ಮುಖಂಡ ನೇಮಾನ್ ಶೇಕ್, ಪುರಸಭಾ ಸದಸ್ಯ ಪ್ರದೀಪ್, ನವೀನ್ ಶೆಟ್ಟಿ ಉಪಸ್ಥಿತರಿದ್ದರು.

## ಹಾಸನ ಜಿಲ್ಲೆಯಲ್ಲಿ ಶೇ.99.5ರಷ್ಟು ಅನುಷ್ಠಾನ: ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ

# ಗ್ಯಾರಂಟಿ ಯೋಜನೆಗಳಿಂದ ಜನರಿಗೆ ಆರ್ಥಿಕ ಚೈತನ್ಯ

• ಪ್ರಜೋದಯ ವರದಿ

**ಹಾಸನ:** ಪಂಚ ಗ್ಯಾರಂಟಿ ಯೋಜನೆಗಳಿಗಾಗಿ ಹಾಸನ ಜಿಲ್ಲೆಗೆ ಇದುವರೆಗೆ 3105.78 ಕೋಟಿ ರೂ. ಹಣ ಬಿಡುಗಡೆ ಆಗಿದ್ದು, ಹಾಸನ ಜಿಲ್ಲೆಯಲ್ಲಿ ಶೇ.99.5ರಷ್ಟು ಅನುಷ್ಠಾನಗೊಂಡಿರುವುದು ಶ್ಲಾಘನೀಯ ಎಂದು ಶಾಸಕ ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಹೇಳಿದ್ದಾರೆ.

ಜಿಲ್ಲಾ ಪಂಚಾಯತ್‌ನಲ್ಲಿ ಸೋಮವಾರ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಗ್ಯಾರಂಟಿ ಯೋಜನೆಗಳು ರಾಜ್ಯದ ಎಲ್ಲಾ ಕುಟುಂಬಗಳಿಗೆ ಆರ್ಥಿಕ ಚೈತನ್ಯ ತುಂಬುವುದರ ಜೊತೆಗೆ ರಾಜ್ಯದ ಆರ್ಥಿಕ ಪುನಶ್ಚೇತನಕ್ಕೂ ಸಹಕಾರಿಯಾಗಿದೆ ಎಂದರಲ್ಲದೆ ತಲಾ ಆದಾಯ ಕೂಡಾ ಹೆಚ್ಚಳವಾಗಿದೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳ ಕುರಿತು ಜನರಲ್ಲಿ ಜಾಗೃತಿ ಉಂಟುಮಾಡಬೇಕು ಎಂದರಲ್ಲದೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ನೋಟು ಅಮಾನ್ಯ, ಅವೈಜ್ಞಾನಿಕ ಜಿಎಸ್‌ಟಿ ನೀತಿ, ಕೋರೋನಾ ಸಮಯದಲ್ಲಿನ ಲಾಕ್ ಡೌನ್‌ನಿಂದ ಜನರು ಆರ್ಥಿಕವಾಗಿ ಸಾಕಷ್ಟು ಸಂಕಷ್ಟಕ್ಕೆ ತುತ್ತಾಗಿದ್ದರು. ಜನರಲ್ಲಿ ಕೊಳ್ಳುವ ಶಕ್ತಿ ಕುಸಿದ ಪರಿಣಾಮ ಆರ್ಥಿಕ ಪರಿಸ್ಥಿತಿ ಕುಸಿತಕಂಡಿತು. ಗ್ರಾಮೀಣ ಭಾಗದ ಜನತೆ ಹಾಗೂ ಮಧ್ಯಮ ವರ್ಗದವರಲ್ಲಿ ಖರೀದಿ ಸಾಮರ್ಥ್ಯ ವೃದ್ಧಿಯಾದರೆ ರಾಜ್ಯ, ದೇಶದ ಆರ್ಥಿಕತೆ ಸರಿದೂಗಲಿದೆ ಎಂಬ ಹಿನ್ನೆಲೆಯಲ್ಲಿ ಪಂಚಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವುದರ ಜೊತೆಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗಿದೆ ಎಂದರು.



**ದೇವರ ದರ್ಶನ:** ಶಕ್ತಿ ಯೋಜನೆಯಿಂದ ಗ್ರಾಮೀಣ ಜನತೆ ಪುಣ್ಯ ಕ್ಷೇತ್ರಗಳ ದರ್ಶನ ಮಾಡಲು ಸಹಕಾರಿಯಾಗಿದೆ. ಕಳೆದ ಬಾರಿ ಹಾಸನಾಂಭ ದರ್ಶನಕ್ಕೆ ಬೀದರ್‌ನಿಂದ ಚಾಮರಾಜನಗರದವರೆಗೆ ಮಹಿಳೆಯರು ಶಕ್ತಿ ಯೋಜನೆ ಮೂಲಕ ಲಕ್ಷಾಂತರ ಸಂಖ್ಯೆಯಲ್ಲಿ ಆಗಮಿಸಿ ದೇವಿಯ ದರ್ಶನ ಪಡೆದರು. 20 ಲಕ್ಷ ಭಕ್ತರು ಹಾಸನಾಂಭ ದರ್ಶನ ಪಡೆದಿದ್ದು ಇದರಲ್ಲಿ ಮಹಿಳೆಯರದ್ದು ಸಿಂಹಪಾಲು. ದೇವರ ಹುಂಡಿಯಲ್ಲಿ 14 ಕೋಟಿ ರೂ. ಹಣ ಸಂಗ್ರಹವಾಗಿದ್ದು ದಾಖಲೆ ಎಂದು ಗ್ಯಾರಂಟಿ ಯೋಜನೆಗಳ ಸಮಿತಿ ಸದಸ್ಯರು ಹೇಳಿದರು.

**ಸಾಲದ ಹಣ ಕಡಿತ ಇಲ್ಲ:** ಗೃಹಲಕ್ಷ್ಮಿ ಹಣವನ್ನು ಸಾಲದ ಕಂತುಗಳಿಗೆ ಬ್ಯಾಂಕುಗಳು ಕಡಿತ ಮಾಡಿಕೊಳ್ಳುತ್ತಿಲ್ಲ. ಒಂದು ವೇಳೆ ಕಡಿತ ಆದರೂ ಎರಡು ಮೂರು ದಿನದಲ್ಲಿ ಆ ಹಣ ಖಾತೆಗೆ ವಾಪಸ್ ಆಗುತ್ತಿದೆ. ಈ ಬಗ್ಗೆ ಫಲಾನುಭವಿಗಳು ಆತಂಕ ಪಡುವ ಅಗತ್ಯವಿಲ್ಲ ಎಂದು ಲೀಡ್ ಬ್ಯಾಂಕ್ ಮ್ಯಾನೇಜರ್ ಸಭೆಗೆ ಮಾಹಿತಿ ನೀಡಿದರು.

**ಪಂಚ ಗ್ಯಾರಂಟಿಗಳ ಪ್ರಗತಿ**

**ಗೃಹಲಕ್ಷ್ಮಿ:** ಗೃಹಲಕ್ಷ್ಮಿ ಯೋಜನೆಯಡಿ ಜಿಲ್ಲೆಯಲ್ಲಿ 4,27,269 ಫಲಾನುಭವಿಗಳಿದ್ದಾರೆ. 2023ರಿಂದ ಜೂನ್ ವರೆಗೆ 1783 ಕೋಟಿ ರೂ. ಹಣ ಫಲಾನುಭವಿಗಳ ಖಾತೆಗೆ ಜಮೆಯಾಗಿದ್ದು ಶೇ.99.5 ರಷ್ಟು ಮಂದಿಗೆ ಯೋಜನೆ ತಲುಪಿದೆ. ಜಿಲ್ಲೆಯಲ್ಲಿ 4201 ಮಂದಿ ಫಲಾನುಭವಿಗಳು ಮರಣ ಹೊಂದಿದ್ದಾರೆ. ಹೀಗಾಗಿ ಮರಣ ಹೊಂದಿರುವವರ ಪಟ್ಟಿ ಕ್ರೋಢೀಕರಿಸಿ ರಾಜ್ಯ ಮತ್ತು ಜಿಲ್ಲಾ ಸಮಿತಿಗೆ ಪ್ರತಿ ತಿಂಗಳು ನೀಡಬೇಕು ಎಂದು ದಿನೇಶ್ ಗೂಳಿಗೌಡ ಅವರು ಸೂಚಿಸಿದರು.

**ಗೃಹಜ್ಯೋತಿ:** ಗೃಹಜ್ಯೋತಿ ಯೋಜನೆಯಡಿ 5,35,989 ಗ್ರಾಹಕರು ನೋಂದಣಿಯಾಗಿದ್ದು 19,78,6793 ಯುನಿಟ್ ಉಚಿತ ವಿದ್ಯುತ್ ಬಳಕೆ ಮಾಡಿದ್ದಾರೆ. ಇದಕ್ಕಾಗಿ ಸರ್ಕಾರ 415 ಕೋಟಿ ರೂ. ಸಬ್ಸಿಡಿ ಹಣವನ್ನು ಪಾವತಿ ಮಾಡಲಾಗಿದ್ದು ಶೇ 100ರಷ್ಟು ಪ್ರಗತಿ ಸಾಧಿಸಲಾಗಿದೆ.

**ಶಕ್ತಿ ಯೋಜನೆ:** ಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ ಸರಾಸರಿ 2 ಲಕ್ಷ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದು, 485 ಕೋಟಿ ರೂ. ಟಿಕೆಟ್ ಹಣವನ್ನು ನಿಗಮಕ್ಕೆ ಸರ್ಕಾರ ಪಾವತಿ ಮಾಡಿದೆ.

**ಅನ್ನಭಾಗ್ಯ:** ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 4,29,023 ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ 407.05 ಕೋಟಿ ರೂ. ಹಣವನ್ನು ವರ್ಗಾಯಿಸಲಾಗಿದೆ. ಫೆಬ್ರವರಿಯಿಂದ 170 ರೂ. ಹಣದ ಬದಲಿಗೆ ಐದು ಕೆಜಿ ಅಕ್ಕಿ ವಿತರಣೆ ಮಾಡಲಾಗುತ್ತಿದೆ. 84% ಬಿಪಿಎಲ್ ಕಾರ್ಡ್‌ದಾರರಿದ್ದು ಎಲ್ಲರಿಗೂ ಸಮರ್ಪಕವಾಗಿ ಅಕ್ಕಿ ವಿತರಣೆ ಮಾಡಲಾಗುತ್ತಿದೆ.

**ಯುವನಿಧಿ:** ಯುವನಿಧಿ ಯೋಜನೆಗೆ ಸಂಬಂಧಿಸಿದಂತೆ 6367 ಫಲಾನುಭವಿಗಳಿಗೆ 15.78 ಕೋಟಿ ರೂ. ಹಣವನ್ನು ಡಿಬಿಟಿ **ಮೂಲಕ ವರ್ಗಾವಣೆ ಮಾಡಲಾಗಿದೆ. ಕಾಲೇಜು**ಗಳಲ್ಲಿ ಯೋಜನೆ ಕುರಿತು ಪ್ರಚಾರ ಮಾಡಿ ನೋಂದಣಿ ಅಭಿಯಾನ ನಡೆಸಲಾಗುತ್ತಿದೆ.

ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ತಾಲ್ಲೂಕು ಅಧ್ಯಕ್ಷ ಹೆಚ್.ಪಿ.ಶ್ರೀಧರ್ ಗೌಡ, ಧರ್ಮಶೇಖರ, ಆನಂದಮೂರ್ತಿ, ಶಿವಕುಮಾರ್, ಸದಸ್ಯರಾದ ಕಮಲಮ್ಮ ಹಾಗೂ ಜಿಪಂ ಸಿಇಒ ಪೂರ್ಣಿಮಾ, ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಕೃಷ್ಣಮೂರ್ತಿ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು, ತಾಲ್ಲೂಕು ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳು ಉಪಸ್ಥಿತರಿದ್ದರು.


**ಹಾಸನದ ಗೌರವಾನ್ವಿತ 7ನೇ ಅಧಿಕ ವ್ಯವಹಾರಿಕ ನ್ಯಾಯಾಧೀಶರು (ಕಿ.ವಿ.) ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ**

ಸಿ.ಮಿಸ್.ನಂ. 647/2025

ಅರ್ಜಿದಾರರು : 1. ರಂಗೇಗೌಡ ಬಿನ್ ಲೇಟ್ ಭೀಮೇಗೌಡ ಸುಮಾರು 90 ವರ್ಷ
2. ಶಿವಣ್ಣ ಬಿನ್ ರಂಗೇಗೌಡ, ಸುಮಾರು 68 ವರ್ಷ
3. ರಂಗಸ್ವಾಮಿ ಬಿನ್ ರಂಗೇಗೌಡ ಸುಮಾರು 56 ವರ್ಷ

1 ರಿಂದ 3ರ ವರೆಗಿನ ಅರ್ಜಿದಾರರ ವಾಸ: ಜಕ್ಕನಹಳ್ಳಿ ಕೊಪ್ಪಲು ಗ್ರಾಮ, ಕಟ್ಟಾಯ ಹೋಬಳಿ, ಹಾಸನ ತಾಲ್ಲೂಕು.

ವಿರುದ್ಧ

ರೆಸ್ಪಾಂಡೆಂಟರು : ಜನನ ಮತ್ತು ಮರಣ ನೊಂದಣಾಧಿಕಾರಿಗಳು ತಹಸೀಲ್ದಾರ್, ಹಾಸನ ತಾಲ್ಲೂಕು.

**: : ಪತ್ರಿಕಾ ಪ್ರಕಟಣೆ : :**

ಅರ್ಜಿದಾರರುಗಳು ಈ ಮೇಲ್ಕಂಡ ಅರ್ಜಿಯನ್ನು ರೆಸ್ಪಾಂಡೆಂಟರ ವಿರುದ್ಧ 1ನೇ ಅರ್ಜಿದಾರರ ಮೊದಲನೇ ಹೆಂಡತಿ, 2ನೇ ಅರ್ಜಿದಾರರ ತಾಯಿ ಮತ್ತು 3ನೇ ಅರ್ಜಿದಾರರ ದೊಡ್ಡಮ್ಮ ಲಕ್ಷ್ಮಮ್ಮ ಕೋಂ ರಂಗೇಗೌಡರವರು ದಿನಾಂಕ: 13/05/1985 ರಂದು ಹಾಸನ ತಾಲ್ಲೂಕು, ಕಟ್ಟಾಯ ಹೋಬಳಿ, ಜಕ್ಕನಹಳ್ಳಿ ಕೊಪ್ಪಲು ಗ್ರಾಮದಲ್ಲಿ ಮೃತಪಟ್ಟಿರುತ್ತಾರೆಂದು ಹಾಗೂ ರೆಸ್ಪಾಂಡೆಂಟರು ತಮ್ಮ ಮರಣ ನೊಂದಣಿ ವಹಿಯಲ್ಲಿ ಮೃತರ ದಿನಾಂಕವನ್ನು ನೊಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ದಾಖಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ನಮೂದಿಸಿರುವ ಮೃತರ ವಾರಸುದಾರರು ಯಾರಾದರೂ ಇದ್ದಲ್ಲಿ ನಿಮ್ಮ ಪರ ತಕರಾರು ಸಲ್ಲಿಸಲು ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆಯನ್ನು ನೀವುಗಳು ನ್ಯಾಯಾಲಯದಲ್ಲಿ ನೀವುಗಳಾಗಲೀ ಅಥವಾ ನಿಮ್ಮ ಪರ ವಕೀಲರಾಗಲೀ ಖುದ್ದಾಗಿ ದಿನಾಂಕ: 30/09/2025 ರಂದು ಬೆಳಿಗ್ಗೆ 11.00 ಗಂಟೆಗೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಪರ ಈ ಮೇಲ್ಕಂಡ ಅರ್ಜಿಗೆ ತಕರಾರು ಇರುವುದಿಲ್ಲವೆಂದು ಅರ್ಜಿದಾರರ ಪರ ಏಕಪಕ್ಷೀಯ ಆದೇಶ ಮಾಡಲಾಗುವುದೆಂದು ಈ ಮೂಲಕ ತಿಳಿಯಪಡಿಸಿರುತ್ತದೆ.

ದಿನಾಂಕ: 30/08/2025 ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಇದನ್ನು ಕೊಡಲಾಗಿದೆ.

ಅರ್ಜಿದಾರರುಗಳ ಪರ ವಕೀಲರು
ಆರ್.ರಮೇಶ, ಬಿ.ಎ., ಎಲ್‌ಎಲ್‌ಬಿ
ಸ್ಥಳ : ಹಾಸನ
ದಿನಾಂಕ : 30/08/2025

ಘನ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರ್
ಹಾಸನದ ಗೌರವಾನ್ವಿತ 7ನೇ ಅಧಿಕ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹಾಸನ.


CMYK CMYK CMYK CMYK

## ಪ್ರತ್ಯೇಕ ಅಪಘಾತ : ಮೂವರ ಸಾವು

• ಪ್ರಜೋದಯ ವರದಿ

**ಹಾಸನ:** ಚನ್ನರಾಯಪಟ್ಟಣ ಗ್ರಾಮಾಂತರ, ಸಂಚಾರ ಹಾಗು ಆಲೂರು ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಮೂವರು ಮೃತಪಟ್ಟಿದ್ದಾರೆ.

ಬೈಕ್‌ಗೆ ಹಿಂದಿನಿಂದ ಬಂದ ಮತ್ತೊಂದು ಬೈಕ್ ಸವಾರ ಡಿಕ್ಕಿ ಮಾಡಿದ್ದರಿಂದ ಒಬ್ಬ ಮೃತಪಟ್ಟು ಮತ್ತೊಬ್ಬ ಗಾಯಗೊಂಡಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕು ಬೇಡಿಗನಹಳ್ಳಿ ಗೇಟ್ ಸಮೀಪ ನಡೆದಿದೆ.

ಗುಂಡಕೆಟ್ಟಹಳ್ಳಿ ಗ್ರಾಮದ ಕೃಷ್ಣಪ್ಪ ಮೃತರು. ಸ್ನೇಹಿತ ಕೃಷ್ಣೇಗೌಡ ಅವರೊಂದಿಗೆ ಚನ್ನರಾಯಪಟ್ಟಣಕ್ಕೆ ಹೋಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಬೈಕ್ ಡಿಕ್ಕಿಯಾಗಿದೆ. ಮುಂದಿನ ಬೈಕ್‌ನಲ್ಲಿದ್ದ ಇಬ್ಬರೂ ಕೆಳಗೆ ಬಿದ್ದಿದ್ದಾರೆ. ಸಾರ್ವಜನಿಕರು ಆಸ್ಪತ್ರೆಗೆ ದಾಖಲಿಸಿದರಾದರೂ ಚಿಕಿತ್ಸೆಗೆ ಸ್ಪಂದಿಸದೆ ಕೃಷ್ಣಪ್ಪ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕಾರು ಡಿಕ್ಕಿಯಾಗಿ ಬೈಕ್‌ನಿಂದ ಕೆಳಕ್ಕುರುಳಿದ್ದ ಮಹಿಳೆ ಮೃತಪಟ್ಟಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕು ಮುರಾರಹಳ್ಳಿ ಗೇಟ್ ಸಮೀಪ ನಡೆದಿದೆ.

ಹಾಸನ ತಾಲ್ಲೂಕು ಚಿಕ್ಕಬೂವನಹಳ್ಳಿ ಗ್ರಾಮದ ಸುಧಾ ಮೃತರು. ಪತಿ ವಿಶ್ವನಾಥ್ ಅವರಿಗೆ ಪೆಟ್ಟಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ದಂಪತಿಗಳಿಬ್ಬರು ಚನ್ನರಾಯಪಟ್ಟಣದಿಂದ ಊರಿಗೆ ವಾಪಾಸಾಗುತ್ತಿದ್ದಾಗ ಎದುರಿನಿಂದ ಬಂದ ಫಾರ್ಚೂನರ್ ಕಾರು ಡಿಕ್ಕಿಯಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಅಪರಿಚಿತ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಆಲೂರು ತಾಲ್ಲೂಕು ಬಲ್ಲೂಪುರ ಗ್ರಾಮದಲ್ಲಿ ನಡೆದಿದೆ.

ಪಾಳ್ಯ ಹೋಬಳಿ ಹೆದ್ದುರ್ಗ ಗ್ರಾಮದ ಪಾಲಾಕ್ಷ ಮೃತರು. ವಾದ್ಯ ನುಡಿಸುವ ವೃತ್ತಿ ಮಾಡಿಕೊಂಡಿದ್ದ ಅವರು ಭಾನುವಾರ ಹಾರಾಪುರದ ಗಣಪತಿ ವಿಸರ್ಜನಾ ಸಮಾರಂಭ ಮುಗಿಸಿಕೊಂಡು ಊರಿಗೆ ವಾಪಾಸಾಗುತ್ತಿದ್ದಾಗ ಅಪರಿಚಿತ ವಾಹನ ಡಿಕ್ಕಿಯಾಗಿದೆ. ಸ್ಥಳೀಯರು ಅವರನ್ನು ಹಿಮ್ಸ್‌ಗೆ ದಾಖಲಿಸಿದರಾದರೂ ಚಿಕಿತ್ಸೆಗೆ ಸ್ಪಂದಿಸದೆ ಮಧ್ಯರಾತ್ರಿ 2ರ ಸಮಯದಲ್ಲಿ ಮೃತಪಟ್ಟಿದ್ದಾರೆ.

# ಮೂರು ವರ್ಷದಲ್ಲಿ ಹಾಮೂಲ್ ನಂಬರ್ ಒನ್

» **ಮೊದಲನೇ ಪುಟದಿಂದ**

ಪ್ರಯತ್ನಿಸುತ್ತಿದ್ದಾರೆ. ಸೋಮನಹಳ್ಳಿ ಕಾವಲಿನಲ್ಲಿ 440 ಎಕರೆಯಲ್ಲಿ 160 ಕೋ.ರೂ. ವೆಚ್ಚದಲ್ಲಿ ತೋಟಗಾರಿಕಾ ಮಹಾವಿದ್ಯಾಲಯ ತೆರೆಯಲು ಹೆಚ್.ಡಿ. ಕುಮಾರಸ್ವಾಮಿ ಅವರ ಸರ್ಕಾರದ ಅವಧಿಯಲ್ಲಿ ನಿರ್ಧರಿಸಲಾಗಿತ್ತು. ನಂತರ ಅಧಿಕಾರಕ್ಕೆ ಬಂದ ಸರ್ಕಾರ ಅದಕ್ಕೆ ಕೊಕ್ಕೆ ಹಾಕಿತು. 250 ಕೋಟಿ ರೂ. ವೆಚ್ಚದಲ್ಲಿ ವೈದ್ಯಕೀಯ ಕಾಲೇಜು ನಿರ್ಮಿಸಿದ್ದೇನೆ. ಹೊಸ ಬಸ್ ನಿಲ್ದಾಣ, ಆಸ್ಪತ್ರೆ, ರಾಷ್ಟ್ರೀಯ ಹೆದ್ದಾರಿ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹೀಗೆ ಎಲ್ಲಾ ಕೆಲಸ ಮಾಡಿದ್ದೇನೆ. ಇವರು ಬಂದು ನಾನು ಕಟ್ಟಿಸಿದ ಕಟ್ಟಡಗಳನ್ನು ಉದ್ಘಾಟಿಸಿ ಹೋಗುತ್ತಾರೆಂದು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಹಾಮೂಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಸಂಘದ ನಿರ್ದೇಶಕರಾದ ಸತೀಶ್ ಹೊನ್ನವಳ್ಳಿ, ನಾರಾಯಣ, ರಾಮಚಂದ್ರ, ಸ್ವಾಮಿಗೌಡ, ಹೆಚ್.ಎಸ್.ಬಸವರಾಜ, ನಿಂಗರಾಜು, ಹೆಚ್.ಡಿ.ಸುನಾಲ್, ಹೆಚ್.ಟಿ.ಆಶಾ, ವಸಂತ, ಎಂ.ಎಸ್. ಸತೀಶ್‌ಕುಮಾರ್, ಕೆ.ಎಸ್. ಮಂಜೇಗೌಡ ಮತ್ತಿತರರಿದ್ದರು.



## ಹಾಮೂಲ್: ವಾರ್ಷಿಕ 2392 ಕೋ.ರೂ. ವಹಿವಾಟು

» **ಮೊದಲನೇ ಪುಟದಿಂದ**

ಒಕ್ಕೂಟದ ವ್ಯಾಪ್ತಿಯಲ್ಲಿ 1665 ಸಂಘಗಳಲ್ಲಿ ಎಎಂಸಿಯು ಘಟಕಗಳು ಹಾಗು ಒಟ್ಟು 358 ಬಿಎಂಸಿ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. 2025-26ನೇ ಸಾಲಿನಲ್ಲಿ ಹೊಸದಾಗಿ 75 ಸಂಘಗಳಿಗೆ ಎಎಂಸಿಯು ಘಟಕಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಪ್ರತಿ ಘಟಕಕ್ಕೆ 1 ಲಕ್ಷದಂತೆ 75 ಲಕ್ಷ ರೂ. ಸಹಾಯಧನ ನೀಡಲಾಗುವುದು. ಕೆಎಂಎಫ್ ನಿರ್ದೇಶನದಂತೆ ಒಕ್ಕೂಟದ ವ್ಯಾಪ್ತಿಯ 1,600 ಸಂಘಗಳಲ್ಲಿ ಎನ್‌ಡಿಡಿಬಿ ಅಭಿವೃದ್ಧಿ ಪಡಿಸಿರುವ ತಂತ್ರಾಂಶವನ್ನು ಅಳವಡಿಸಿದೆ. ಇದರಿಂದ ಉತ್ಪಾದಕರಿಗೆ ಹಾಲು ಹಾಕಿದ ಕೂಡಲೇ ಗುಣಮಟ್ಟದಫಲಿತಾಂಶದೊರೆಯುತ್ತಿ ದೆಂದರು.

ಒಕ್ಕೂಟವು ಹೆಚ್ಚುವರಿ ಹಾಲು ಉತ್ಪಾದಿಸುವ ಒಕ್ಕೂಟಗಳಲ್ಲಿ ಮೊದಲ ಸ್ಥಾನದಲ್ಲಿದೆ. ಸೀಮಿತ ಮಾರುಕಟ್ಟೆ ಕೊರತೆಯಿಂದಾಗಿ ದಿನನಿತ್ಯ 3.5 ರಿಂದ 4 ಲಕ್ಷ ಲೀ. ಹಾಲನ್ನು ಪರಿವರ್ತನೆಗಾಗಿ ಕಳುಹಿಸಿಕೊಡಬೇಕಾಗಿದೆ. ಬೆಂಗಳೂರು ಮಾರುಕಟ್ಟೆ ಹಂಚಿಕೆ ಮಾಡಿಕೊಡುವ ಬಗ್ಗೆ ಕಳೆದ 10 ವರ್ಷಗಳಿಂದ ಕೆಎಂಎಫ್ ಮತ್ತು ಸರ್ಕಾರಕ್ಕೆ ಕೋರಿಕೆ ಸಲ್ಲಿಸಲಾಗಿದೆ ಎಂದು ಹೇಳಿದರು.

**60 ಸಾವಿರ ರಾಸುಗಳಿಗೆ ವಿಮೆ**

ಈ ಸಾಲಿನಲ್ಲಿ 60 ಸಾವಿರ ರಾಸುಗಳನ್ನು ವಿಮಾ ಯೋಜನೆಗೆ ಒಳಪಡಿಸಲು ಯೋಜಿಸಲಾಗಿದೆ. ಅಂದಾಜು ವಿಮಾ ಪ್ರೀಮಿಯಂ ಮೊತ್ತ 10.45 ಕೋ.ರೂ. ಆಗಲಿದೆ. ಒಕ್ಕೂಟ ಮತ್ತು ಹಾಮೂಲ್ ರೈತ ಕಲ್ಯಾಣ ಟ್ರಸ್ಟ್ ವತಿ ಯಿಂದ ಅಂದಾಜು 6.28 ಕೋ. ರೂ. ಅನುದಾನ ನೀಡಲಾಗುತ್ತಿದೆ. 146 ಕ್ಲಸ್ಟರ್ ಎ.ಐ. ಕಾರ್ಯಕರ್ತರಿಗೆ ಆರೋಗ್ಯ ವಿಮೆ ಪಾಲಿಸಿ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದು, ಅದಕ್ಕಾಗಿ 5 ಲಕ್ಷ ರೂ. ಹಾಮೂಲ್ ರೈತ ಕಲ್ಯಾಣ ಟ್ರಸ್ಟ್ ವತಿಯಿಂದ ಭರಿಸಲಾಗಿದೆ ಎಂದು ತಿಳಿಸಿದರು.

> ಒಕ್ಕೂಟದಿಂದ ನಿರ್ಮಾಣ ಮಾಡುತ್ತಿರುವ ಮೆಗಾ ಡೇರಿ ಆವರಣವನ್ನು ಆಕರ್ಷಕ ಪ್ರೇಕ್ಷಣೀಯ ಸ್ಥಳವಾಗಿ ನಿರ್ಮಾಣ ಮಾಡುವ ಬಗ್ಗೆ ಅಂದಾಜು 60 ಕೋ.ರೂ. ವೆಚ್ಚದ ಯೋಜನೆ ಹಮ್ಮಿಕೊಳ್ಳಲಾಗಿದೆ. ಉದ್ಯಾನವನ, ಕಾರಂಜಿ, ಕೆಫಿಟೇರಿಯ, ವಸ್ತುಸಂಗ್ರಹಾಲಯ ನಿರ್ಮಾಣ ಮಾಡಲಾಗುವುದು.
> -ಹೆಚ್.ಡಿ.ರೇವಣ್ಣ, ಒಕ್ಕೂಟದ ಅಧ್ಯಕ್ಷ

# ಟೋಲ್ ದರ ಏರಿಕೆ: ಮಧ್ಯ ರಾತ್ರಿಯಿಂದಲೇ ಜಾರಿ

• ಪ್ರಜೋದಯ ವರದಿ

**ಹಾಸನ:** ನೆಲಮಂಗಲ ರಾಷ್ಟ್ರೀಯ ಹೆದ್ದಾರಿ ಮೂಲಕ ಹಾಸನ ರಾಷ್ಟ್ರೀಯ ಹೆದ್ದಾರಿ-75ರ ರಸ್ತೆಯಲ್ಲಿ ಸಂಚಾರ ಮಾಡುವ ವಾಹನ ಸವಾರರಿಗೆ ಸೋಮವಾರದಿಂದ ದರ ಏರಿಕೆ ಮಾಡಲಾಗಿದೆ.

ನೆಲಮಂಗಲ ದೇವಿಹಳ್ಳಿ ಎಕ್ಸ್‌ಪ್ರೆಸ್ ಪ್ರೈವೇಟ್ ಲಿಮಿಟೆಡ್ ಟೋಲ್‌ಗಳಲ್ಲಿ ಸೋಮವಾರ ಮಧ್ಯ ರಾತ್ರಿ 12 ಗಂಟೆಯಿಂದ ಏರಿಕೆ ಜಾರಿಯಾಗಲಿದೆ. ಅದರಿಂದ ನೆಲಮಂಗಲ-ಹಾಸನ ರಾಷ್ಟ್ರೀಯ ಹೆದ್ದಾರಿಯ ಟೋಲ್‌ಗಳಲ್ಲಿ ವಾಹನ ಸವಾರರಿಗೆ ಹೆಚ್ಚಿನ ಸುಂಕ ಹೊರೆ ಎದುರಾಗಿದೆ. ದೊಡ್ಡಕರೇನಹಳ್ಳಿ ಟೋಲ್ ಹಾಗು ಕಾರಬೈಲು ಟೋಲ್ ಪ್ಲಾಜಾಗಳಲ್ಲಿ, ಏಕ ಮುಖ ಸಂಚಾರಕ್ಕೆ 5 ರೂ., ದ್ವಿಮುಖ ಸಂಚಾರಕ್ಕೆ 10 ರೂ., ದರ ಏರಿಕೆ ಮಾಡಲಾಗಿದೆ.

ಫಾಸ್‌ಟ್ಯಾಗ್ ಇರುವ ಕಾರು, ಜೀಪು, ವ್ಯಾನ್ ಹಾಗು ಹಗುರ ವಾಹನಗಳಿಗೆ ಏಕಮುಖ ಸಂಚಾರಕ್ಕೆ 55 ರೂ ಇದೆ. ಮಧ್ಯರಾತ್ರಿಯಿಂದ ಅದರ ದರ 60 ರೂ.ಗೆ ಏರಿಕೆ ಆಗಲಿದೆ. ದಿನದ ಸಂಚಾರವು 85 ರೂ. ನಿಂದ 90 ರೂ. ಗೆ ಏರಿಕೆ ಆಗುತ್ತಿದೆ. ಫಾಸ್‌ಟ್ಯಾಗ್ ಇಲ್ಲದ ವಾಹನಗಳಿಗೆ ಏಕಮುಖ ಸಂಚಾರಕ್ಕೆ ಟೋಲ್ ದರ 110



ರೂನಿಂದ 120 ರೂ. ಗೆ ಏರಿಕೆ ಆಗುತ್ತದೆ. ಲೈಟ್ ಕಮರ್ಷಿಯಲ್ ವಾಹನ ಹಾಗು ಸರಕು ಸಾಗಣೆ ವಾಹನಗಳಾದರೆ ಏಕಮುಖ ಸಂಚಾರಕ್ಕೆ 100 ರೂ, ದಿನದ ಸಂಚಾರಕ್ಕೆ 155 ರೂ. ಟೋಲ್ ಏರಿಸಲಾಗುತ್ತಿದೆ.

ಹೆದ್ದಾರಿಯಲ್ಲಿ ಟೋಲ್ ದರಗಳನ್ನು ಏರಿಸುವುದರಿಂದ ವಾಹನ ಮಾಲೀಕರ ಜೇಬಿಗೆ ಕತ್ತರಿ ಬೀಳಲಿದೆ. ಸಾಗಣೆ ವೆಚ್ಚ ಇತ್ಯಾದಿಗಳು ಏರಿಕೆ ಆಗಲಿವೆ. ಇದರ ಪರಿಣಾಮ ಬೇರೆ ಬೇರೆ ಸ್ತರ ಗಳಲ್ಲೂ ಆಗುತ್ತದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಈ ಕ್ರಮಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಲಘು ವಾಣಿಜ್ಯ ಹಾಗು ಸರಕು ವಾಹನಗಳು ಈಗಿನ ದರ ಏಕಮುಖ 100 ಹಾಗು ದಿನದ ಸಂಚಾರ 155 ದರ ಏರಿಕೆಯಿಂದ ವಾಹನ ಮಾಲೀಕರ ಜೇಬಿಗೆ ಕತ್ತರಿ ಇದ್ದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿರುದ್ಧ ಜನಸಾಮಾನ್ಯರ ಆಕ್ರೋಶಕ್ಕೆ ಕಾರಣವಾಗಿದೆ.

## ಭಯೋತ್ಪಾದನೆ: ದ್ವಿಮುಖ ನೀತಿ ಸ್ವೀಕಾರಾರ್ಹವಲ್ಲ

» **ಮೊದಲನೇ ಪುಟದಿಂದ**

ಸರ್ವಾನುಮತದಿಂದ ವಿರೋಧಿಸಬೇಕು. ಇದು ಮಾನವೀಯತೆಯ ಕಡೆಗೆ ನಮ್ಮ ಕರ್ತವ್ಯ ಎಂದು ಹೇಳಿದರು.

ಶೃಂಗಸಭೆಯಲ್ಲಿ ಭಾಗವಹಿಸುತ್ತಿರುವ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರನ್ನು ನೇರವಾಗಿ ಹೆಸರಿಸದೆ, ಕೆಲವು ದೇಶಗಳು ಭಯೋ ತ್ಪಾದನೆಗೆ ಬಹಿರಂಗ ಬೆಂಬಲ ನೀಡುವುದನ್ನು ಸಹಿಸಬಹುದೇ ಎಂದು ಮೋದಿ ಪ್ರಶ್ನಿಸಿದರು.

ಯಾವುದೇ ದೇಶದ ಅಭಿವೃದ್ಧಿಯ ಆಧಾರ ಅದರ ಭದ್ರತೆ, ಶಾಂತಿ ಮತ್ತು ಸ್ಥಿರತೆ ಮೇಲೆ ನಿಂತಿರುತ್ತದೆ. ಆದರೆ, ಭಯೋತ್ಪಾದನೆ, ಪ್ರತ್ಯೇಕತಾವಾದ ಮತ್ತು ಉಗ್ರವಾದ ಈ ಹಾದಿಯಲ್ಲಿ ದೊಡ್ಡ ಸವಾಲುಗಳಾಗಿವೆ. ಭಯೋತ್ಪಾದನೆಯು ಕೇವಲ ಒಂದು ದೇಶದ ಭದ್ರತೆಗೆ ಸವಾಲಲ್ಲ, ಬದಲಾಗಿ ಎಲ್ಲಾ ಮಾನವೀಯತೆಗೆ ಸಾಮಾನ್ಯ ಸವಾಲಾಗಿದೆ. ಯಾವುದೇ ದೇಶ, ಸಮಾಜ, ನಾಗರಿಕರು ಅದರಿಂದ ಸುರಕ್ಷಿತರೆಂದು ಪರಿಗಣಿಸಲು ಸಾಧ್ಯವಿಲ್ಲ. ಆದ್ದರಿಂದ, ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಭಾರತ ಏಕತೆಯನ್ನು ಒತ್ತಿ ಹೇಳಿದೆ. ಜಂಟಿ ಮಾಹಿತಿ ಕಾರ್ಯಾಚರಣೆಯನ್ನು ಮುನ್ನಡೆಸುವ ಮೂಲಕ ಅಲ್ ಖೈದಾ ಮತ್ತು ಅದರೊಂದಿಗೆ ಸಂಬಂಧ ಹೊಂದಿರುವ ಭಯೋತ್ಪಾದಕ ಸಂಘಟನೆಗಳ ವಿರುದ್ಧ ಹೋರಾಡಲು ಭಾರತ ಉಪಕ್ರಮವನ್ನು ತೆಗೆದು ಕೊಂಡಿತು. ಭಯೋತ್ಪಾದನೆಗೆ ಹಣಕಾಸು ಒದಗಿಸುವುದರ ವಿರುದ್ಧ ನಾವು ನಮ್ಮ ಧ್ವನಿ ಎತ್ತಿದ್ದೇವೆ. ನಿಮ್ಮ ಬೆಂಬಲಕ್ಕಾಗಿ ನಾನು ಕೃತಜ್ಞತೆ ವ್ಯಕ್ತಪಡಿಸುತ್ತೇನೆಂದು ತಿಳಿಸಿದರು.

## ಹಾಡ ಹಗಲೇ ಚಿನ್ನಾಭರಣ ಕಳವು

**ಸಕಲೇಶಪುರ:** ಹಾಡ ಹಗಲೇ ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 8.20 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಅರೆಕೆರೆಯಲ್ಲಿ ನಡೆದಿದೆ.

ಗ್ರಾಮದ ರಾಣಿ ಎಂಬುವವರ ಮನೆಯಲ್ಲಿ ಭಾನುವಾರ ಕಳ್ಳತನವಾಗಿದೆ. ರಾಣಿ ಅವರ ಪತಿ ಬೆಂಗಳೂರಿನಲ್ಲಿ ವಾಹನ ಓಡಿಸಿಕೊಂಡಿದ್ದು, ಪುತ್ರ ಹಾಸನದಲ್ಲಿ ವ್ಯಾಸಂಗ ಮಾಡಿಕೊಂಡಿದ್ದಾರೆ. ರಾಣಿ ಒಬ್ಬರೇ ಮನೆಯಲ್ಲಿರುವುದನ್ನು ಖಚಿತಪಡಿಸಿಕೊಂಡಿದ್ದ ಕಳ್ಳರು ಅವರು ಇಲ್ಲದ ಸಮಯ ನೋಡಿಕೊಂಡು ಕೃತ್ಯ ಎಸಗಿದ್ದಾರೆ.

ಭಾನುವಾರ ಮಧ್ಯಾಹ್ನ 2.30ರ ಸಮಯದಲ್ಲಿ ಮನೆ ಬಾಗಿಲು ಹಾಕಿ ಎದುರುಗಡೆಯ ಮನೆಗೆ ರಾಣಿ ತೆರಳಿದ್ದರು. ಸಂಜೆ 4.15ರ ವೇಳೆಗೆ ವಾಪಾಸ್ ಬಂದು ನೋಡಿದಾಗ ಬಾಗಿಲು ಮುರಿದು ಬೀರುವಿನಲ್ಲಿಟ್ಟಿದ್ದ 9 ಗ್ರಾಂ ತೂಕದ 3 ಚಿನ್ನದ ಉಂಗುರ, 5 ಗ್ರಾಂ ತೂಕದ ಒಂದು ಚಿನ್ನದ ಉಂಗುರ, 35 ಗ್ರಾಂ ತೂಕದ ಚಿನ್ನದ ಒಂದು ಲಾಂಗ್ ಚೈನ್, 10 ಗ್ರಾಂ ತೂಕದ ಒಂದು ಜೊತೆ ಚಿನ್ನದ ಓಲೆ ಜುಮುಕಿ, 5 ಗ್ರಾಂ ತೂಕದ 2 ಜೊತೆ ಓಲೆ, 1.5 ಗ್ರಾಂ ತೂಕದ ಒಂದು ಚಿನ್ನದ ಮೂಗುತಿ, 1 ಗ್ರಾಂ ತೂಕದ 2 ಚಿಕ್ಕ ಚಿನ್ನದ ಡಾಲರ್, 5 ಗ್ರಾಂ ತೂಕದ ಮುರಿದು ಹೋಗಿರುವ ಕೆಲವು ಚಿನ್ನದ ಆಭರಣ, 250 ಗ್ರಾಂ ತೂಕದ ಬೆಳ್ಳಿ ತಟ್ಟೆ, 250 ಗ್ರಾಂ ತೂಕದ ಬೆಳ್ಳಿ ಚೊಂಬು, 100 ಗ್ರಾಂ ತೂಕದ ಲಕ್ಷ್ಮೀ ಬೆಳ್ಳಿ ಮುಖವಾಡ, 250 ಗ್ರಾಂ ತೂಕದ ಬೆಳ್ಳಿಯ 2 ದೀಪಾಲೆ ಕಂಬ, 100 ಗ್ರಾಂ ತೂಕದ ಬೆಳ್ಳಿ ಕುಂಕುಮದ ಬಟ್ಟಲು, 50 ಗ್ರಾಂ ತೂಕದ ಬೆಳ್ಳಿ ಕುಂಕುಮದ ಬಟ್ಟಲು ಇಡುವ ಪ್ಲೇಟ್, 100 ಗ್ರಾಂ ತೂಕದ ಬೆಳ್ಳಿಯ ಎರಡು ಲಿಂಗದ ಕಾಯಿ, 50 ಗ್ರಾಂ ತೂಕದ 2 ಜೊತೆ ಬೆಳ್ಳಿ ಕಾಲುಂಗುರ, 75 ಗ್ರಾಂ ತೂಕದ 3 ಬೆಳ್ಳಿಯ ನಾಣ್ಯ ಹಾಗು 1.50 ಲಕ್ಷ ರೂ. ನಗದು ದೋಚಿದ್ದಾರೆ.

## ಹಣಕಾಸಿನ ಜಗಳ: ಮಹಿಳೆ ಕೊಲೆಗೆ ಯತ್ನ

**ಚನ್ನರಾಯಪಟ್ಟಣ:** ತನ್ನಿಂದ ಆರ್ಥಿಕ ಲಾಭ ಪಡೆದು ಕೊನೆಗೆ ತನ್ನ ವಿರುದ್ಧವೇ ದ್ವೇಷ ಸಾಧಿಸುತ್ತಿದ್ದಾಳೆಂದು ಆಕ್ರೋಶದಿಂದ ವ್ಯಕ್ತಿಯೊಬ್ಬ ಮಹಿಳೆಯನ್ನು ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿರುವ ಘಟನೆ ತಾಲ್ಲೂಕಿನ ಜಂಬೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ವಿಜಯಲಕ್ಷ್ಮೀ ಗಾಯಾಳು. ಶ್ರವಣೇರಿ ಗ್ರಾಮದ ಜಗದೀಶ್ ಆರೋಪಿ. ಪತಿ ಚನ್ನಕೇಶವ ಎರಡೂವರೆ ವರ್ಷದ ಹಿಂದೆ ಅನಾರೋಗ್ಯದಿಂದ ಮೃತಪಟ್ಟಿದ್ದು ವಿಜಯಲಕ್ಷ್ಮೀ ಗಾರೆ ಕೆಲಸ ಮಾಡಿಕೊಂಡಿದ್ದಾರೆ.

5 ವರ್ಷದಿಂದ ಜಗದೀಶ್ ಜೊತೆಗೆ ವಿಜಯಲಕ್ಷ್ಮೀ ಸಂಪರ್ಕದಲ್ಲಿ ದ್ದರು. ಆಕೆಯ ಮನೆಗೆ ಬೇಕಾದ ಟಿವಿ ಮತ್ತಿತರ ಸಾಮಾಗ್ರಿ ತಂದುಕೊಟ್ಟಿರುವು ದಲ್ಲದೆ ಆರ್ಥಿಕ ಸಹಾಯವನ್ನು ಜಗದೀಶ್ ಮಾಡಿದ್ದ. ಕಳೆದ ಒಂದು ತಿಂಗಳ ಹಿಂದೆ ಇಬ್ಬರ ನಡುವೆ ಹಣಕಾ ಸಿನ ವಿಚಾರಕ್ಕೆ ಗಲಾಟೆ ನಡೆದು ತನ್ನ ಮೇಲೆ ಅತ್ಯಾಚಾರ ಎಸಗಿದ್ದಾನೆಂದು ವಿಜಯಲಕ್ಷ್ಮೀ ಠಾಣೆಗೆ ದೂರು ನೀಡಿ ದ್ದರು. ಜಗದೀಶ್‌ನನ್ನು ಕರೆ ತಂದಿದ್ದ ಪೊಲೀಸರು ವಿಚಾರಣೆ ನಡೆಸಿ ದಾಗ ಎಫ್‌ಐಆರ್ ದಾಖಲಿಸುವುದು ಬೇಡವೆಂದು ಮಹಿಳೆ ವಾಪಾಸ್ಸಾಗಿದ್ದರು ಎನ್ನಲಾಗಿದೆ.

ಆ. 31ರ ಭಾನುವಾರ ವಿಜಯಲಕ್ಷ್ಮೀ ಮನೆಗೆ ಬಂದಿದ್ದ ಜಗದೀಶ್ ಮತ್ತೆ ತಾನು ಮಾಡಿದ ಸಹಾಯವನ್ನು ನೆನಪಿಸಿ ಹಣ ವಾಪಾಸ್ ಕೊಡುವಂತೆ ಕೇಳಿದ್ದರಿಂದ ಗಲಾಟೆ ನಡೆದಿದೆ. ಈ ವೇಳೆ ಆತ ಚಾಕುವಿನಿಂದ ಕುತ್ತಿಗೆಗೆ ಇರಿದಿದ್ದು, ತಪ್ಪಿಸಿಕೊಳ್ಳಲೆತ್ನಿಸಿದಾಗ ಕೆನ್ನೆ ಹಾಗು ಕಿವಿಗೆ ತಾಗಿದೆ. ಗಲಾಟೆ ಶಬ್ದ ಕೇಳುತ್ತಿದ್ದಂತೆ ಆಕೆಯ ಮೈದುನ ಮತ್ತು ಆತನ ಹೆಂಡತಿ ಬಂದು ಜಗಳ ಬಿಡಿಸಿದ್ದಾರೆ. ಜಗದೀಶ್ ನಾಪತ್ತೆಯಾಗಿದ್ದಾನೆ.

## ವಾಣಿಜ್ಯ ಸಿಲಿಂಡರ್ ದರ ಇಳಿಕೆ

• ಪ್ರಜೋದಯ ವರದಿ



**ನ'ವ'ದ'ಹ'ಲಿ :** ವಿಮಾನಗಳಲ್ಲಿ ಬಳಸುವ ಇಂಧನ (ಎಟಿಎಫ್) ಮತ್ತು ವಾಣಿಜ್ಯ ಬಳಕೆಯ ಸಿಲಿಂಡರ್ ದರವನ್ನು ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಕಂಪನಿಗಳು ಕಡಿತಗೊಳಿಸಿವೆ. ಹೊಸ ದರವು ಸೋಮವಾರದಿಂದ ಜಾರಿಗೆ ಬಂದಿದೆ.

19 ಕೆ.ಜಿ ತೂಕದ ವಾಣಿಜ್ಯ ಸಿಲಿಂಡರ್ ದರವು 51.50 ಕಡಿಮೆಯಾಗಿದ್ದು, ದೆಹಲಿಯಲ್ಲಿ 1,580 ಆಗಿದೆ. ಏಪ್ರಿಲ್‌ನಿಂದ ಇದುವರೆಗೆ ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆ 223ರಷ್ಟು ಇಳಿಕೆಯಾಗಿದೆ.

**ಎಟಿಎಫ್ ದರ ಇಳಿಕೆ**

ವಿಮಾನ ಇಂಧನ ದರವು ಪ್ರತಿ ಕಿಲೋ ಲೀಟರ್‌ಗೆ (1 ಸಾವಿರ ಲೀಟರ್) ಶೇ.1.4ರಷ್ಟು ಇಳಿಕೆಯಾಗಿದೆ. ದೆಹಲಿಯಲ್ಲಿ ಬೆಲೆ 1,308 ರಷ್ಟು ಕಡಿಮೆಯಾಗಿದ್ದು, 90,713 ಆಗಿದೆ. 14.2 ಕೆ.ಜಿ. ತೂಕದ ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್ ದರದಲ್ಲಿ ಬದಲಾವಣೆ ಇಲ್ಲ.

### ಬೆಳವಾಡಿ ಸಮುದಾಯ ಭವನದಲ್ಲಿ ವಿಚಾರ ಸಂಕಿರಣ | ವಿವಿಧ ಪರಿಕರ ವಿತರಣೆ

# ಅಂತರ್ ಬೇಸಾಯ ಕೈಗೊಳ್ಳಲು ರೈತರಿಗೆ ಸಲಹೆ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನಲ್ಲಿ ವರ್ಷಪೂರ್ತಿ ನೀರಾವರಿ ಮೂಲಗಳು ಇರುವ ಹಿನ್ನಲೆ ರೈತರು ತೋಟಗಾರಿಕೆ ಬೆಳೆಗಳ ನಡುವೆ ಅಂತರ ಬೇಸಾಯ ಕೈಗೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕೆಂದು ಶಾಸಕ ಎ.ಮಂಜು ಅವರು ತಿಳಿಸಿದರು.

ತಾಲ್ಲೂಕಿನ ಬೆಳವಾಡಿ ಗ್ರಾಮದ ಸಮುದಾಯ ಭವನದಲ್ಲಿ ಸೋಮವಾರ ತೋಟಗಾರಿಕೆ ಇಲಾಖೆ ವತಿಯಿಂದ ತೆಂಗುಬೆಳೆಗಾರರಿಗೆ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಮತ್ತು ತೆಂಗು ಅಭಿವೃದ್ಧಿ ಮಂಡಳಿ ಸಹಯೋಗದೊಂದಿಗೆ ರೈತರ ತೋಟಗಳ ಪ್ರಾತ್ಯಕ್ಷತೆ ಕಾರ್ಯಕ್ರಮದಡಿ ವಿವಿಧ ಪರಿಕರಗಳನ್ನು ವಿತರಣೆ ಮಾಡಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ 2,500 ಹೆಕ್ಟೆರ್‌ನಲ್ಲಿ ತೆಂಗು ಬೆಳೆಯನ್ನು ರೈತರು ಕೈಗೊಂಡಿದ್ದಾರೆ. ಈ ಬೆಳವಣಿಗೆ ತೃಪ್ತಿದಾಯಕವಾಗಿಲ್ಲ. ಉತ್ತಮ ಪರಿಸರ, ನೀರಾವರಿ ಇರುವ ಹಿನ್ನಲೆ ತೆಂಗು ಪ್ರದೇಶ ವಿಸ್ತರಣೆಯಾಗಬೇಕಿದೆ. ನಿರೀಕ್ಷೆಗೂ ಮೀರಿ ಬೆಲೆ ದೊರೆಯುತ್ತಿದೆ. ಇತರೆ ಬೆಳೆಗಳನ್ನು ಹೋಲಿಸಿದರೆ ತೆಂಗು ಬೆಳೆಗೆ ರೋಗ ಕಡಿಮೆ ಇದೆ. ಬೇಸಾಯ ಕೂಡ ಅದೇ ನಿಟ್ಟಿನಲ್ಲಿರುತ್ತದೆ.



ನಿಯಮಾನುಸಾರ ತೆಂಗು ಬೆಳೆಯನ್ನು ಕೈಗೊಳ್ಳುವ ಜೊತೆಗೆ ತೋಟಗಾರಿಕೆ, ಇತರೆ ಕೃಷಿಯನ್ನು ಅಂತರ ಬೇಸಾಯವಾಗಿ ಕೈಗೊಳ್ಳಬೇಕೆಂದು ಸಲಹೆ ನೀಡಿದರು.

ಇತ್ತೀಚೆಗೆ ಹೈನುಗಾರಿಕೆಯಲ್ಲಿಯೂ ಕೂಡ ಹೆಚ್ಚಿನ ರೈತರು ತೊಡಗಿಕೊಳ್ಳುತ್ತಿದ್ದಾರೆ. ರೇಷ್ಮೆ ಕೃಷಿ ಕೂಡ ಲಭದಾಯಕವಾಗಿದೆ. ಫಲವತ್ತಾದ ಭೂಮಿ ಇದೆ. ಸರ್ಕಾರದಿಂದಲೂ ಕೂಡ ಸಾಕಷ್ಟು ಸಹಾಯಧನ ರೇಷ್ಮೆ ಕೃಷಿಗೆ ದೊರೆಯುತ್ತಿದೆ. ತಿಂಗಳಿಗೊಮ್ಮೆ ಈ ಬೆಳೆಯಿಂದ ಆದಾಯ ಬರುತ್ತದೆ. ದೀರ್ಘಾವಧಿ ಬೆಳೆಗಳಿಗೆ ರೈತರು ಮಾರುಹೋಗುವ ಬದಲು ರೇಷ್ಮೆ ಕೃಷಿಯತ್ತಾ ಮುಂದಾಗಬೇಕಿದೆ ಎಂದರು.

ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ರಾಜೇಶ್ ಅವರು ಮಾತನಾಡಿ, ತಾಲ್ಲೂಕಿನಲ್ಲಿಯೂ ಕೂಡ ಇತ್ತೀಚೆಗೆ ಅಡಿಕೆ, ತೆಂಗು ಹಾಗೂ ಇತರೆ ತೋಟಗಾರಿಕೆ ಬೆಳೆಗಳತ್ತಾ ರೈತರು ಆಸಕ್ತಿ ಹೊಂದಿ ಕೃಷಿಯನ್ನು ಕೈಗೊಳ್ಳುತ್ತಿರುವುದು ಕಂಡುಬಂದಿದೆ. ತೆಂಗು ಬೆಳೆಗೆ ಉತ್ತಮ ವಾತವರಣ ತಾಲ್ಲೂಕಿನಲ್ಲಿದೆ. ಚನ್ನರಾಯಪಟ್ಟಣ, ಅರಸೀಕೆರೆ ತಾಲ್ಲೂಕಿನಲ್ಲಿ ಒಂದು ಲಕ್ಷ ಹೆಕ್ಟೆರ್ ತೆಂಗು ಪ್ರದೇಶವಿದೆ. ನಮ್ಮಲ್ಲಿ ತುಂಬಾ ಕಡಿಮೆ ಇದೆ. ಕಳೆದ ವರ್ಷದಿಂದ ಬೆಳವಾಡಿ ಸುತ್ತಮುತ್ತಲ 468 ಮಂದಿ ತೆಂಗು ಬೆಳೆಗಾರರಿಗೆ ಇಲಾಖೆ ವತಿಯಿಂದ ಉಚಿತವಾಗಿ ಪರಿಕರಗಳನ್ನು ವಿತರಣೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಕಾರ್ಯ ವಿಸ್ತರಣೆ ಆಗಲಿದೆ. ವಾತವರಣ, ನಿಯಮಾನುಸಾರ ತೋಟಗಾರಿಕೆ ಬೆಳೆಗಳನ್ನು ಕೈಗೊಂಡರೇ ಅಧಿಕ ಲಾಭ ಬರಲಿದೆ ಎಂದು ಹೇಳಿದರು.

ಜಿಲ್ಲಾ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಯೋಗೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ನಿಂಗೇಗೌಡ, ಗ್ರಾಮ ಪಂಚಾಯಿತಿ ಅಧ್ಯಕ್ಷ ಮೋಹನ್, ಮುಖಂಡರಾದ ಗೋವಿಂದೇಗೌಡ, ಮಂಜುನಾಥ್, ಕಮಲಮ್ಮ, ರೈತ ಸಂಘದ ಅಧ್ಯಕ್ಷ ಯೋಗಣ್ಣ, ತೋಟಗಾರಿಕೆ ಇಲಾಖೆ ಅಧಿಕಾರಿ, ಸಿಬ್ಬಂದಿ ಹಾಗು ರೈತ ಫಲಾನುಭವಿಗಳು ಇದ್ದರು.

# ಸ್ಪರ್ಧಾತ್ಮಕ ಮನೋಭಾವನೆಗೆ ಒತ್ತುನೀಡಿ

### ಸ್ಮಾರ್ಟ್ ಕ್ಲಾಸ್, ಸ್ಪರ್ಧಾತ್ಮಕ ಬೋಧನಾ ಕೊಠಡಿ ಉದ್ಘಾಟನೆ

• ಪ್ರಜೋದಯ ವರದಿ

**ಅರಕಲಗೂಡು:** ಪ್ರೌಢಶಿಕ್ಷಣ ಪಡೆಯುತ್ತಿರುವ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವನೆಗೆ ಒತ್ತುನೀಡಿದರೇ ಅವರ ಮುಂದಿನ ಶಿಕ್ಷಣ ಬದುಕ ರೂಪಿಸಿಕೊಳ್ಳಲು ನೆರವಾಗಲಿದೆ ಎಂದು ಶಾಸಕ ಎ.ಮಂಜು ಅವರು ತಿಳಿಸಿದರು.

ತಾಲ್ಲೂಕಿನ ಬೆಳವಾಡಿ ಸರ್ಕಾರಿ ಪ್ರೌಢಶಾಲೆಯಲ್ಲಿ ನೂತನವಾಗಿ ಆರಂಭಿಸಿರುವ ಸ್ಮಾರ್ಟ್ ಕ್ಲಾಸ್ ಮತ್ತು ಸ್ಪರ್ಧಾತ್ಮಕ ಬೋಧನಾ ಕೊಠಡಿ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ಖಾಸಗಿ ಶಾಲೆಗಳಲ್ಲಿ ದೊರೆಯದಂತಹ ಶಿಕ್ಷಣ ಕ್ರಮಗಳು ಇದ್ದು, ಗ್ರಾಮೀಣ ಭಾಗದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಶಾಲೆಗಳಲ್ಲಿಗೆ ದಾಖಲಾಗಿ ಉಚಿತವಾಗಿ ದೊರೆಯುವ ಸೌಕರ್ಯ ಪಡೆದು ಉನ್ನತಿ ಹೊಂದಬೇಕೆಂದು ಹೇಳಿದರು.

ನೂತನ ಕೊಠಡಿಯಲ್ಲಿ ಎಸ್‌ಎಸ್‌ಎಲ್‌ಸಿ ನಂತರ ಮುಂದೇನು ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ ಎಂದು ನಾಮಕರಣ ಮಾಡಲಾಗಿದೆ. ಈ



ಎರಡು ವಿಷಯಗಳನ್ನು ವಿದ್ಯಾರ್ಥಿಗಳು ಅವಲೋಕನ ನಡೆಸಿದರೇ ಮುಂದಿನ ಶಿಕ್ಷಣದ ಆಯ್ಕೆ ಈಗಿನಿಂದಲೇ ತೆರೆದುಕೊಳ್ಳುತ್ತದೆ. ಎಸ್‌ಎಸ್‌ಎಲ್‌ಸಿ ಪಾಸದ ಮೇಲೆ ಮುಂದಿನ ಶಿಕ್ಷಣದ ಆಯ್ಕೆಯನ್ನು ನೀವೇ ಆಯ್ಕೆ ಮಾಡಿಕೊಳ್ಳುವ ಹಂತಕ್ಕೆ ಈ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ ಕರೆದುಕೊಂಡು ಹೋಗಲಿದೆ. ಇಲ್ಲಿ ಶಿಕ್ಷಣ ಬೋಧನೆ ಮಾಡುವ ಶಿಕ್ಷಕರು ಮಕ್ಕಳನ್ನು ಸಿದ್ಧಗೊಳಿಸುವುದು ಅಷ್ಟೇ ಮುಖ್ಯವೆಂದು ಸಲಹೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ. ನಾರಾಯಣ ಅವರು ಮಾತನಾಡಿ, ಈ ಶೈಕ್ಷಣಿಕ ಸಾಲಿನಿಂದಲೇ ತಾಲ್ಲೂಕಿನ 28 ಸರ್ಕಾರಿ ಪ್ರೌಢಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್ ಮೂಲಕ ಎಸ್‌ಎಸ್‌ಎಲ್‌ಸಿ ನಂತರ ಮುಂದೇನು ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರಗಳನ್ನು ಆರಂಭಿಸುವ ಚಿಂತನೆ ನಡೆದಿದೆ. ಇಂದು ಬೆಳವಾಡಿ ಶಾಲೆಯಲ್ಲಿ ಸಕಲ ಸಿದ್ಧತೆಗಳೊಂದಿಗೆ ಆರಂಭಗೊಂಡಿದ್ದು, ಮುಂದಿನ 3 ತಿಂಗಳೊಳಗೆ ಉಳಿದ ಶಾಲೆಗಳಲ್ಲಿ ಕಾರ್ಯಾರಂಭಗೊಳ್ಳಲಿದೆ. ಶಾಸಕರ ಸಂಪೂರ್ಣ ಸಹಕಾರದೊಂದಿಗೆ ಈ ಕಾರ್ಯ ಅಣಿಗೊಳಿಸಲಾಗುತ್ತಿದೆಂದು ಹೇಳಿದರು.

ಶಾಲೆಯ ಮುಖ್ಯಶಿಕ್ಷಕ ಮೋಹನ್, ಇಸಿಒಗಳಾದ ಯೋಗೇಶ್, ಶಿವಪ್ರಕಾಶ್, ಶಿಕ್ಷಕ ಚಲುವಯ್ಯ, ಸಹ ಶಿಕ್ಷಕರು, ಊರಿನ ಪ್ರಮುಖರು ಹಾಜರಿದ್ದರು.

# ಆಲೋಚನಾ ಶಕ್ತಿ ವೃದ್ಧಿಸಲು ಪ್ರಬಂಧ ಸಹಕಾರಿ

• ಪ್ರಜೋದಯ ವರದಿ

**ಬೇಲೂರು:** ವಿದ್ಯಾರ್ಥಿಗಳಿಗೆ ಪ್ರಬಂಧ ಹಾಗು ಚಿತ್ರಕಲೆ ಸ್ಪರ್ಧೆಗಳು ಬರವಣಿಗೆ, ಸಂವಹನ ಕೌಶಲ್ಯ ಸುಧಾರಿಸಲು ಮತ್ತು ವಿಷಯಗಳ ಬಗ್ಗೆ ಆಳವಾದ ತಿಳುವಳಿಕೆ ಬೆಳೆಸಲು ಸಹಕಾರಿ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ರಾಜೇಗೌಡ ಅವರು ಹೇಳಿದರು .

ಪಟ್ಟಣದ ಬಸ್ ನಿಲ್ದಾಣ ಮುಂಭಾಗದ ಅಂಬೇಡ್ಕರ್ ಭವನದಲ್ಲಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಏರ್ಪಡಿಸಿದ್ದ ಪ್ರಬಂಧ ಮತ್ತು ಚಿತ್ರಕಲೆ ಸ್ಪರ್ಧೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ಸ್ಪರ್ಧೆಗಳು ಮಕ್ಕಳು ತಮ್ಮ ಆಸಕ್ತಿಗಳನ್ನು ಅನ್ವೇಷಿಸಲು ಮತ್ತು ತಮ್ಮ ವೃತ್ತಿಜೀವನವನ್ನು ರೂಪಿಸಲು ಸಹಾಯ ಮಾಡುತ್ತವೆ. ಮಕ್ಕಳ ಆಲೋಚನಾ ಪ್ರಕ್ರಿಯೆಯನ್ನು ಬಲಪಡಿಸಲು, ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡಲು ಮತ್ತು ಅವರ ಬೌದ್ಧಿಕ ಆಸಕ್ತಿಗಳನ್ನು ಗುರುತಿಸಲು ಇದು ಸಹಾಯ ಮಾಡುತ್ತದೆ ಎಂದರು.

ವಿದ್ಯಾರ್ಥಿಗಳು ತಾವು ಡಾಕ್ಟರ್, ಇಂಜಿನೀಯರ್ ಹಾಗೂ ದೇಶ ಕಾಯುವ ಸೈನಿಕನಾಗುವ ಕನಸನ್ನು ಕಾಣಬೇಕು. ಹಲವಾರು ಹಿರಿಯರ ಒಗ್ಗಟ್ಟಿನ ಹೋರಾಟದ ಫಲವಾಗಿ ಇಂದು ಭಾರತ ದೇಶವು ಅಭಿವೃದ್ಧಿ ರಾಷ್ಟ್ರವಾಗಿ ಹೊರಹೊಮ್ಮಿದೆ. ವಿಶ್ವದ ಮೂರು ನಾಲ್ಕು ರಾಷ್ಟ್ರಗಳಲ್ಲಿ ಭಾರತವು ತನ್ನ ಚಾಪನ್ನು ಮೂಡಿಸಿದೆ. ಮುಂದಿನ ದಿನಗಳಲ್ಲಿ ಉನ್ನತ ಹುದ್ದೆಗಳನ್ನು ಗಳಿಸಿದರು ನಮಗೆ ಮಾರ್ಗದರ್ಶನ ನೀಡಿದ ಶಿಕ್ಷಕರು, ಸುರಕ್ಷವಾಗಿ ಜೀವಿಸಲು ಅವಕಾಶ ಕೊಟ್ಟಿರುವ ಭಾರತ ಮಾತೆಯ ಮೇಲಿನ ದೇಶ ಭಕ್ತಿ ಹಾಗೂ ತಂದೆ-ತಾಯಿ ಮೇಲಿನ ಪ್ರೀತಿಯನ್ನು ಮರೆಯಬಾರದೆಂದು ಹೇಳಿದರು.





ಪಟ್ಟಣದ 20 ಕ್ಕೂ ಹೆಚ್ಚು ಶಾಲಾ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ರಾಜೇಗೌಡ, ಪತ್ರಕರ್ತರ ಸಂಘದ ಅಧ್ಯಕ್ಷ ರಘುನಾಥ್, ಕಾರ್ಯದರ್ಶಿ ಬಿ.ಬಿ.ಶಿವರಾಜ್, ಖಜಾಂಚಿ ಎನ್.ಅನಂತು, ಉಪಾಧ್ಯಕ್ಷ ಜಗದೀಶ್, ಮಾಜಿ ಅಧ್ಯಕ್ಷ ರಾಘವೇಂದ್ರ ಹೊಳ್ಳ, ಮಾಜಿ ಕಾರ್ಯದರ್ಶಿ ವೆಂಕಟೇಶ್, ವಿಜಯಕುಮಾರ್, ಬಿ.ಎಲ್. ಲಕ್ಷ್ಮಣ್, ಮಲ್ಲೇಶ್, ಲೋಹಿತ್ ಬಿ.ಆರ್.ಆರಾಧ್ಯ, ಗಣೇಶ್, ಬಿ.ಕೆ.ರಮೇಶ್, ರವಿಹೊಳ್ಳ ಇತರರು ಹಾಜರಿದ್ದರು.

# ಸ್ಕಾಲರ್ಸ್ ಸ್ಕೂಲ್ ಗಣೇಶ ಮೂರ್ತಿ ವಿಸರ್ಜನೆ

• ಪ್ರಜೋದಯ ವರದಿ

**ಹಾಸನ:** ಗಣೇಶ ಚತುರ್ಥಿ ಪ್ರಯುಕ್ತ ಸ್ಕಾಲರ್ಸ್ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಪ್ರತಿ ಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನೆ ಭಕ್ತಿಭಾವ ಹಾಗು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅದ್ದೂರಿಯಾಗಿ ನೆರವೇರಿತು.

ಶಾಲಾ ಆವರಣದಲ್ಲಿ ಅಲಂಕರಿಸಿದ ಗಣೇಶ ವಿಗ್ರಹಕ್ಕೆ ಹೂವು, ಹಣ್ಣು ಹಾಗು ನೈವೇದ್ಯ ಸಮರ್ಪಿಸಿ ಪೂಜೆ ಸಲ್ಲಿಸಲಾಯಿತು. ವಿದ್ಯಾರ್ಥಿಗಳ ಸಮೂಹ ಗಾನದಲ್ಲಿ ಗಣಪತಿ ಸ್ತುತಿ ಗೀತೆಗಳು ಮೊಳಗಿದಾಗ ಪೂರ್ತಿ ಆವರಣವೇ ಭಕ್ತಿಮಯ ವಾತಾವರಣ ದಿಂದ ಕೂಡಿತ್ತು. ವಿದ್ಯಾರ್ಥಿಗಳು ತಯಾರಿಸಿದ ಹೂವಿನ ಅಲಂಕಾರ ಗಣಪತಿಯ ಸಾನ್ನಿಧ್ಯವನ್ನು ವೈಭವ ಯುತವ ನ್ನಾಗಿಸಿತು. ವಿದ್ಯಾರ್ಥಿಗಳ ಸಾಂಸ್ಕೃತಿಕ ನೃತ್ಯಪ್ರದರ್ಶನವು ಕಾರ್ಯಕ್ರಮದ ಪ್ರಮುಖ ಆಕರ್ಷಣೆ ಆಗಿದ್ದು, ವಿವಿಧ ತರಗತಿಯ ಮಕ್ಕಳು ಗಣಪತಿ ಭಜನೆಗಳಿಗೆ ಹೊಂದಿಕೊಂಡು ಸಾಂಪ್ರದಾಯಿಕ ಮತ್ತು ಆಧುನಿಕ ಶೈಲಿಯ ನೃತ್ಯಗಳನ್ನು ಪ್ರದರ್ಶಿಸಿದರು. ಕಿರಿಯ ಮಕ್ಕಳ 'ಮೂಷಿಕ ವಾಹನ' ನೃತ್ಯ ಎಲ್ಲರ ಮನಸೂರೆಗೊಳಿಸಿದರೆ ಹಿರಿಯ



ವಿದ್ಯಾರ್ಥಿಗಳು ಭಾವ ಪೂರ್ಣ ನೃತ್ಯಗಳ ಮೂಲಕ ಗಣಪತಿಯ ಶಕ್ತಿ ಸ್ವರೂಪ ಪ್ರತಿಬಿಂಬಿಸಿದರು.

ಶಾಲಾ ಆವರಣದಿಂದ ಗಣೇಶ ವಿಸರ್ಜನೆ ಮೆರವಣಿಗೆ ಬಾವುಟ, ಹೂವಿನ ಹರಕೆ, ಭಜನೆಗಳೊಂದಿಗೆ ಆರಂಭವಾಯಿತು. ವಿದ್ಯಾರ್ಥಿಗಳು ಶಿಸ್ತಿನಿಂದ ಮೆರವಣಿಗೆಯಲ್ಲಿ ಸಾಗಿದರು. ಕೈತಾಳಮದ್ದಲೆ, ಡೊಳ್ಳು, ಚಂಡೆ ಬಾರಿಸಿದ ವಿದ್ಯಾರ್ಥಿಗಳು ಉತ್ಸವದ ಸಂಭ್ರಮವನ್ನು ಹೆಚ್ಚಿಸಿದರು. ಗಣಪತಿ ಬಪ್ಪಾ ಮೋರೆಯಾ ಘೋಷಣೆ ಕೂಗಿದಾಗ ವಾತಾವರಣವೇ ಉತ್ಸಾಹ ದಿಂದ ತುಂಬಿತು.

ವಿಸರ್ಜನೆಗಾಗಿ ಸಿದ್ಧಪಡಿಸಿದ ಕೆರೆಯಲ್ಲಿ ಗಣಪತಿಯನ್ನು ಸಾಗಿಸುವ ಸಂದರ್ಭದಲ್ಲಿ ಹೂವು, ಕುಂಕುಮ ಮತ್ತು ಹಣ್ಣುಗಳಿಂದ ವಂದನೆ ಸಲ್ಲಿಸಲಾಯಿತು. ನೀರಿನಲ್ಲಿ ವಿಗ್ರಹವನ್ನು ಮುಳುಗಿ ಸುವಾಗ ವಿದ್ಯಾರ್ಥಿಗಳು ಮುಂದಿನ ವರ್ಷ ಮತ್ತೆ ಬಾ ಎಂದು ಪ್ರಾರ್ಥನೆ ಸಲ್ಲಿಸಿದರು. ಆ ಕ್ಷಣದಲ್ಲಿ ಅನೇಕ ಮಕ್ಕಳ ಕಣ್ಣುಗಳಲ್ಲಿ ಭಕ್ತಿಯ ಕಣ್ಣೀರು ಜಿನುಗಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಆಡಳಿತಾಧಿಕಾರಿ ಡಾ.ಹೆಚ್.ಎನ್. ಚಂದ್ರಶೇಖರ್ ಅವರು ಮಾತನಾಡಿ, ಗಣಪತಿ ಹಬ್ಬವು ನಮ್ಮ ಸಂಸ್ಕೃತಿಯ ಜೀವಾಳ. ಇದು ಮಕ್ಕಳಲ್ಲಿ ಭಕ್ತಿ, ಶಿಸ್ತು ಹಾಗು ಒಗ್ಗಟ್ಟಿನ ಮೌಲ್ಯಗಳನ್ನು ಬೆಳೆಸುತ್ತದೆ. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಪ್ರತಿಭೆ ಬೆಳೆಸುವ ವೇದಿಕೆಯೆಂದರು.

ಶಾಲೆಯ ಆಡಳಿತ ಮಂಡಳಿ ಕಾರ್ಯದರ್ಶಿ ಮಮತಾ ಅವರು ಮಾತನಾಡಿ, ವಿದ್ಯಾರ್ಥಿಗಳ ಕಲಾತ್ಮಕ ಶಕ್ತಿ, ಶಿಸ್ತಿನಿಂದ ಕೂಡಿದ ಪ್ರದರ್ಶನ ಹಾಗು ಸಮನ್ವಯವು ಶಾಲೆಯ ಹೆಮ್ಮೆಯಾಗಿದೆ ಎಂದು ಪ್ರಶಂಸಿಸಿದರು.

ಉಪಪ್ರಾಂಶುಪಾಲ ಆ್ಯಂಟನಿ ಅವರು ಮಾತನಾಡಿ, ಗಣಪತಿ ಹಬ್ಬವು ಕೇವಲ ಧಾರ್ಮಿಕ ಆಚರಣೆ ಮಾತ್ರವಲ್ಲ. ಇದು ಪರಿಸರ ಸಂರಕ್ಷಣೆ, ಒಗ್ಗಟ್ಟು ಹಾಗು ಕಲೆಯ ಪಾಠವನ್ನೂ ಕಲಿಸುತ್ತದೆ. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಶ್ರದ್ಧೆ ಮತ್ತು ಸೃಜನಶೀಲತೆ ಸ್ಕಾಲರ್ಸ್ ಇಂಟರ್ ನ್ಯಾಷನಲ್ ಸ್ಕೂಲ್‌ನ ಹೆಗ್ಗಳಿಕೆಯನ್ನು ಹೆಚ್ಚಿಸಿದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

# ರಸ್ತೆ-ಒಳಚರಂಡಿ ಕಾಮಗಾರಿಗೆ ಚಾಲನೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಬಾಗೂರು ಹೋಬಳಿ ಕೇಂದ್ರದ ಸೊಪ್ಪಿನಬೀದಿ ವೇಣು ಗೋಪಾಲ ಹಾಗೂ ಆಂಜನೇಯ ದೇವಾಲಯ ಸೇರಿ ವಿವಿಧ ಬಡಾವಣೆಗಳನ್ನು ಸಂಪರ್ಕಿಸುವ ರಸ್ತೆ ಹಾಗೂ ಒಳಚರಂಡಿ ನಿರ್ಮಾಣಕ್ಕೆ 1 ಕೋಟಿ ರೂ. ಅನುದಾನ ನೀಡಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ತಿಳಿಸಿದರು.

ನುಗ್ಗೇಹಳ್ಳಿ ಹೋಬಳಿ ಕೇಂದ್ರದ ಶ್ರೀ ಸಂತೆಕಾಳೇಶ್ವರಿ ದೇವಾಲಯದ ಮುಂಭಾಗದ ಮುಖ್ಯ ರಸ್ತೆಯಲ್ಲಿ 1 ಕೋಟಿ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಹಾಗೂ ಒಳಚರಂಡಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕಳೆದ ಅನೇಕ ವರ್ಷಗಳಿಂದ ಗ್ರಾಮದ ಸೊಪ್ಪಿನ ಬೀದಿಯಿಂದ ವೇಣುಗೋಪಾಲ ಹಾಗೂ ಆಂಜನೇಯ ಸ್ವಾಮಿ ದೇವಾಲಯ ಮತ್ತು ಚಿನ್ನಸ್ವಾಮಿ ಅವರ ಮನೆಯಿಂದ ನರಸಿಂಹಸ್ವಾಮಿ ದೇವಾಲಯದ ಹೊರಗಿನ ಸುಮಾರು 1 ಕಿಲೋ ಮೀಟರ್ ಕಾಂಕ್ರೀಟ್ ರಸ್ತೆ ಹಾಗೂ ಒಳಚರಂಡಿ ನಿರ್ಮಾಣ



ಕಾಮಗಾರಿಗೆ 1 ಕೋಟಿ ಗೂ ಹೆಚ್ಚು ಅನುದಾನ ನೀಡಲಾಗಿದೆ. ಮುಂಬರುವ ದಿನಗಳಲ್ಲಿ ಕೆಂಬಾಳು ಮುಖ್ಯ ರಸ್ತೆ ಸಂಪರ್ಕಿಸುವ ಬಡಾವಣೆಗಳ ರಸ್ತೆ ಅಭಿವೃದ್ಧಿಗೆ ಆದ್ಯತೆ ಮೇರೆಗೆ ಅನುದಾನ ನೀಡಲಾಗುತ್ತದೆ ಎಂದರು.

ಈಗಾಗಲೇ ಹೋಬಳಿ ಕೇಂದ್ರದಲ್ಲಿ ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣ ಮಾಡಲಾಗಿದೆ. ಜೊತೆಗೆ 2 ಕೋಟಿ ರೂ. ವೆಚ್ಚದಲ್ಲಿ ಪ್ರವಾಸಿ ಮಂದಿರ ನಿರ್ಮಾಣಕ್ಕೆ ಅನುದಾನ ನೀಡಲಾಗಿದ್ದು, ಶೀಘ್ರದಲ್ಲೇ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗುತ್ತದೆ. ಜೊತೆಗೆ ಐಟಿಐ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಉನ್ನತ ಶಿಕ್ಷಣ ಸಚಿವರಾದ ಡಾ.ಶರಣ್ ಪ್ರಕಾಶ್ ಪಾಟೀಲ್ ಅವರಿಗೆ ಮನವಿ ಮಾಡಲಾಗಿದೆ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಬಿ. ಹೆಚ್.ಶಿವಣ್ಣ ಅವರು ಮಾತನಾಡಿ, ಶಾಸಕರು ಪಕ್ಷಾತೀತವಾಗಿ ಹೋಬಳಿ ಕೇಂದ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಐಟಿಐ ಕಾಲೇಜಿಗೆ ಹೊಸ ಕಟ್ಟಡದ ಅವಶ್ಯಕತೆ ಇದ್ದು ಈ ಬಗ್ಗೆ ಶಾಸಕರು ಹೆಚ್ಚು ಗಮನ ಹರಿಸಿ ಹೊಸ ಕಟ್ಟಡ ನಿರ್ಮಾಣಕ್ಕೆ ಆದ್ಯತೆ ನೀಡುವಂತೆ ಮನವಿ ಮಾಡಿದರು.

ಲ್ಯಾಂಡ್ ಆರ್ಮಿ ಇಂಜಿನೀಯರ್ ಪ್ರೀತಮ್, ಟಿಎಪಿಎಂಎಸ್ ನಿರ್ದೇಶಕ ಮನು, ಗುತ್ತಿಗೆದಾರರಾದ ಹರೀಶ್, ಕಾಂತರಾಜ್, ಮಲ್ಲೇಶ್, ಚಂದ್ರೇಗೌಡ, ಮುಖಂಡರಾದ ಓಬಳಾಪುರ ಬಸವರಾಜ್, ಧರಣಿಕುಮಾರ್, ವಿ.ಎನ್.ಮಂಜುನಾಥ್, ಹುಲಿಕೆರೆ ಸಂಪತ್‌ಕುಮಾರ್, ದಿವಾಕರ್ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK